Sri C. M. REVANA SIDDIAH.—It is not the S.R.C. report which brought Bellary to Mysore. It is the Misra's award that brought Bellary to Mysore. Misra's award is final and not the S.R.C. Report.

SRI V. S. PATIL.—S.R.C. Report gave Bellary to Andhra and in exchange for that loss, they had given Belgaum to Mysore. Subsequently after another enquiry, Bellary has been returned to Mysore. Then, the basis for keeping Belgaum, which was given on the same condition, is not warranted.

Why we claim Belgaum—I will refer to the first Assembly that was held after the Re-organisation of the States. From the proceedings of that Assembly, I should like to refer to the percentage that was quoted by my Hon'ble friend Mr. B. K. Dalavai on 22nd December 1956. His speech is reported from pages 151 to 157. He has given on page 152, the percentage of the tract, not taluka or district of the Marathi area which we are claiming. He has given from Khanapur taluka—out of a total population of 68,000, 58,000 were Marathis, *i.e.*, 77 per cent. Belgaum taluka—out of a population of 2,23,000 the Marathis were 1,33,000, *i.e.*, 59 per cent were Marathis and the Kannad people were only 23.9 per cent. I am not referring to full taluka. That is important, but only the tract which we are claiming. Then Belgaum city, 1,01,000—Marathi population 55 per cent or to be exact 54.7 per cent, and Kannad population is 23.8 per cent.

4-00 P.M.

I am quoting the figures which were given by Sri B. K. Dalvi. Muslims in Belgaum are 15.5 per cent. But these Muslims take Urdu-Marathi and not Urdu-Kannada. In all the Urdu primary schools in Belgaum City, the second language is Marathi and not Kannada. So, if we take this percentage, then, we can take it as 74 per cent in that area. Then, Sir, Chikodi taluka has a total population of one lakh out of which 70,000 are Marathi people which comes to 74 per cent and Kannada people will be only 16 per cent. We claim a small track which adjoins the Maharastra. Then, Athoni has a population of 14,000 and odd out of which 9,000 are Marathi with 55 per cent.

MR. SPEAKER.—He must have relied upon certain census.

SRI V. S. PATIL.—Sir, I do not want to waste much of the time of this House. I have pointed out that these figures which he has quoted are from Government Book from 1951 census. One more thing which I would like to point out is, when this speech was made on the floor of this House by Sri Dalvi, not a single word of his speech has been challenged by anybody, especially by Government.

SRI S. GOPALA GOWDA.—There are enough challenges. We have placed volumes of figures and not that it is not challenged.

MR. SPEAKER.—I will safeguard it by observing and it will go into the records: it should not be taken that these have not been challenged.

SRI V. S. PATIL.—Sir, to this speech, the then Chief Minister Sri Nijalingappa has answered on 24th and that speech is given on page 224. He has fairly conceded because it was a new State, he new the

(SRI V. S. PATIL)

difficulties of the border people, he new the disputes at that time. He said, "there are big chunks of territory belonging to Maharastra and I for one will not hesitate to say 'let them go to Maharastra'." That was the liberal attitude taken by the Chief Minister then. But now he is being forced by these, not only white caps, but those who are begotted and bent upon saying that the country will be ruined of these areas go. These forces are forcing him to say against this. So, I should like to say that the area which we are claiming is predominently Marathi which adjoins Marathi State and it is contiguous. Sir, all the Village Panchayets, the Municipalities and Taluka Boards have resolved several times that they want to join this particular track. We do not want a single Kannada village in Maharastra. They have passed resolutions that these villages are parts of these taluks and they should join Maharastra. Are you going to give any importance in democracy to the wishes expressed by the people for the last ten years, people of that area or do you want to rule them by force? Is it possible and feasible? Will it create hatred or unanimity between people of Maharastra and Mysore? That is the important aspect to be considered here. I submit, neglecting their own brethern living outside Mysore, why should they hamper or try to get the territories which were inadvertently included in Mysore? Sir, Sri G. V. Hallikere who is the Head of this movement has said: let us digest what is in our State and then we shall ask for other territories. What does it mean? It means that Sri Gudleppa and his colleagues want to Kanadise these areas in this state and then ask for other remaining territories of the Kannada areas lying outside the State. This is a sinister intention and that is why it should be opposed tooth and nail. We have got to respect the wishes of the people there.

Sir, some wrong impression has been created by Government regarding the Kannada areas that are lying outside. I just looked yesterday in the Census book of Madras and I found that the Niligiri district consists of three talukas with a population of more than three lakhs of people. All those people are hankering or willing to join Mysore State. But, nobody has taken up their case. Why? Because, if that case is taken up, Sri Kamaraj will be hurt. Then, there is Hosur which is just a suburb of this city. It is also Kannada area. Nobody has taken up this case because that big man like Rajaji was born there. It is all personal cult of individual.

Mr. SPEAKER.—If the Hon'ble Member goes on like this about the population of Niligiri and Hosur and so on, he will be entering into unnecessary debate.

Sri V. S. PATIL.—Sir, Belgaum is a prey of this great person Gangadhar Rao Deshpande the Karnatak Simha. Unfortunately, all his property was in Kannada area and that is why he wanted to retain Belgaum in Karnatak. He has written a letter at that time to the

President of India and it has been published and from that authority I am speaking; I do not speak without any authority.

Sri S. GOPALA GOWDA.—Sri Patil's son-in-law whose property is in Belgaum has decided to contest to Rajya Sabha from this constituency.

Sri V. S. PATIL.—Sir, so long as we have been included in a particular territory, we have got the constitutional right to fight in election which is allowed.

Why should Sri S. Gopala Gowda feel for it because my son in-law fought for it? ? We could see the lurking hatred in his mind when he said Maharashtra infantry is mercenary.

Sri S. GOPALA GOWDA.—Because Sri V. S. Patil casts an aspersion on Gangadhara Rao Deshapande. He says that because the properties of Deshapande were here he argued that Belgaum should be retained in Karnataka. It is a very absurd argument and that is why I have to say that Sri Patil brought his son in-law to contest from Karnatak.

Mr. SPEAKER.—I have stated that I will give a ruling tomorrow or the day after that.

Sri V. S. PATIL.—My friends ought to remember that Marathas, Rajputs and all these martial races have kept up our independence. Otherwise Sri Gopala Gowda and myeelf would have disappeared long ago.

Sri S. GOPALA GOWDA,—I know the role played by your martial race when we were fighting with Britishers.

Mr. SPEAKER.—We are traversing beyond the scope of the debate. I will only ask the hon'ble members to go to the lounge and discuss freely.

Sri V. S. PATIL.—Regarding this particular movement that is started, I would like to ask my hon'ble friends on the other side, of course when I do not belong to that party I am not entitled to interfere their internal administration at all but as they are our rulers and as they are expected to rule at least for 10 years more, that they must have discipline. Can I quote an example of discipline in Bombay? One of the hon'ble ministers Sri Brijalal Biyani in Bombay cabinet some words which were against the policy of the State and the result was he was driven out not only from the cabinet but he was forced to resign. even the congress membership.

Mr. SPEAKER.—Are we deciding what the Bombay people did? I do not know why they did it and I am not going to allow a debate on that.

Sri V. S. PATIL.—I am giving an example of discipline which ought to be there. He was dis-membered even to be an ordinary member of the Congress party. That is the discipline in the Bombay branch of the Congress party and what is it here? The High Command decides a particular thing and all these M. L. As and M. L. Cs go on challenging it.

Mr. SPEAKER.—Are we comparing the discipline in one State with that of another?

Sri V. S. PATIL.—Yes. It is the branch of the same party.

Mr. SPEAKER.—I am not concerned with any party here.

Sri V. S. PATIL.—We are concerned because they are our rulers.

Mr. SPEAKER.—It is all discipline with the party.

Sri V. S. PATIL.—My submission is that such a sort of discipline ought to be there in the constituent bodies of the ruling party. It is not proper to challenge for smooth running of the administration of our country.

I should like to refer to some criticism passed by some hon'ble members. The eminent member of this House Sri Ganji Veerappa stated that the M. E. S. will be ousted out in the coming general elections.

Mr. SPEAKER.—The hon'ble member Sri B. P. Kadam has done it better when he said that he is going to come back here. I am going to welcome him.

Sri V. S. PATIL.—It is just possible. After all it is the people who are to vote. But the mischief played by this Government in dividing our constituency, joining a greater part of Karnataka area and then to say that we will see in the next elections, is really bad.

Mr. SPEAKER.—The hon' member is placing the blame in a wrong place. It is the Central Government and the Commissioner for Delimitation that do this.

Sri V. S. PATIL.—We know all these procedures. I have fought for it and certainly to some extent I suceeded and failed 90 per cent.

Mr. SPEAKER.—The final word rests with the Election Commissioner.

Sri V. S. PATIL.—They are not absolutely independent. There is no doubt about it. But they are guided by the Governments concerned. That is the main thing. This Government have divided, created new taluks, circles and new constituencies by reducing the marathi people and by joining Kannada villages to our area. That is why Sri G. Veerappa was boasting that the MES people will be ousted. He referred to so many other things to which my friend has already referred to. I do not want to take much time of the House. He uttered some threats saying that "the tactics by which you got Bombay will fail here in Belgaum". We want to set how they are going to fail. It is a challenge on the floor of this House given by my friend Sri G. Veerappa and the treasury benches. If they want Belgaum, let them fight on this issue at Belgaum provided all the Government officers who have been transferred to that city recently that is, during these 10 years, do not vote. The whole mischief is they are in large numbers. They are in large numbers. They are creating this problem. Everybody knows it.

Our friend Sri A. J. Doddameti also has putforth one threat. It is reported that if boundary commission is forced by the Centre, then the Centre will have to send a bigger army to Belgaum than they sent to Pakistan or Chinese borders. That is what it is reported in the press. So, who is instigating violence ?

ಶ್ರೀ ಎ. ಜೆ. ದೊಡ್ಡಮೇಟಿ.—ನನ್ನ ಪರ್ಸನಲ್ ಎಕ್ಸ್‌ಪ್ಲನೇಷನ್ ಇದೆ. ಬೆಳಗಾವಿಯನ್ನು ಅವಸರ ಮಾಡಿ ತೆಗೆದುಕೊಳ್ಳಬೇಕು ಎಂದರೆ ಚವ್ಹಾಣರು ಸೈನ್ಯದೊಡನೆ ಬರಬೇಕಾದಿತು ಎಂದು ಹೇಳಿದ್ದೇನೆ.

Sri V. S. PATIL.—The military of this country does not belong to Sri Chavan. He is nominally there because he is taken by the Prime Minister. The army does not belong to anybody. It belongs to the country.

Sri A. J. DODDAMETI.—He belongs to Maharashtra.

Sri V. S. PATIL.—The implication of this sentence clearly goes to show that he wants to foment violence and a person who wants to foment violence or instigates violence does not deserve to sit in this particular House which is based upon a democratic Constitution. This sort of thing will not have any effect upon us or upon any of the politicians at the Centre. There is one danger to which I have already referred. Some of the hon. Members referred to the movement started by Mr. Anne for Vidharba and in the papers it is reported that one Swamiji of Urvakonda has stated that Maharashtrians want to build another Sivaji-type empire and he has supported the case of Vidharba. That is what is reported in the Express on 26th July 1966. These heads of muttadipadis......

Sri B. V. MAGAVI.—On a point of order, Sir. Sri V. S. Patil is referring to individuals who are not in this House. He should not be allowed to refer to those names and muttadipadis.

Sri V. S. PATIL.—I am not criticising that particular individual. What my fear is that even though we are in a secular State, these muttadipadis and Swamis and Sankaracharyas are interfering with politics and thus they are spoiling the name of secularism in our country. We have to guard against these things and see that none of these religious heads-let them belong to any religion or caste-interfer in the politics of the country. With these words, I request the hon. Members to use their patient common sense and come to some decision. Do not be swayed by by tickets and do injustice to anybody.

Mr. SPEAKER.—I am issuing the agenda for tomorrow and I am convening the House at 8-30 A. M. tomorrow. Members may kindly note.

An HON'BLE MEMBER.—No.

Mr. SPEAKER.—It is not for him to say 'No'. Do I want his permission ? Those who do not want to come need not come ; if there is no quorum I will adjourn.

† ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ಅಧ್ಯಕ್ಷರೇ, ಮೊನ್ನೆಯಿಂದ ಈ ಮಾನ್ಯ ಸಭೆಯಲ್ಲಿ ಗಡಿ ಬದಲಾವಣೆ ವಿಚಾರದಲ್ಲಿ ವಾದವಿವಾದಗಳು ಬಹಳವಾಗಿ ನಡೆಯುತ್ತಿವೆ. ಈ ವಿಚಾರ 1956ನೆಯ ಇಸವಿ ನವೆಂಬರು ಒಂದನೆಯ ತಾರೀಖು ತೀರ್ಮಾನವಾಗಿತ್ತು. ಇದನ್ನು ಮತ್ತೆ ತೆಗೆದುಕೊಂಡು ಇದಕ್ಕೆ ಜೀವ ಕೊಟ್ಟು ಇವತ್ತು ದೇಶದಲ್ಲಿ ಒಂದು ದೊಡ್ಡ ಆಂದೋಳನವಾಗುವುದಕ್ಕೆ ಅವಕಾಶಮಾಡಿದ್ದಾರೆ. ಇದಕ್ಕೆ ಕಾರಣ ನಾವು ಸ್ವಲ್ಪ ಹುಡುಕುವುದಾದರೆ ಇವತ್ತು ಮಹಾರಾಷ್ಟ್ರ ರಾಜ್ಯದ ಹಿಂದಿನ ಮುಖ್ಯ ಮಂತ್ರಿಗಳು ಮತ್ತು ಈಗಿನ ಮುಖ್ಯ ಮಂತ್ರಿಗಳು ಕೇಂದ್ರ ಸರಕಾರದಮೇಲೆ ಇಲ್ಲದ ಒತ್ತಾಯವನ್ನು ತಂದಿರುವುದು ಎಂಬುದು ಎಲ್ಲರಿಗೂ ವಿದಿತವೇ ಆಗಿದೆ. ಈ ಸಭೆಯಲ್ಲಿರುವ 5-6 ಜನ ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಅನಾವಶ್ಯಕವಾಗಿ ಒಂದು ಕಲ್ಪನೆಯನ್ನು ಅವರ ಮನಸ್ಸಿನಲ್ಲಿ ಮಾಡಿಕೊಂಡು ಈ ರಾಜ್ಯದಲ್ಲಿ ಸುಖವಾಗಿರಲು ಸಾಧ್ಯವಿಲ್ಲ ಎಂದು ಭಾವಿಸಿ ಒಂದು ಹಟಮಾರಿತನದಿಂದ ಅವರು ಮಾಡಿದ ವಾದವನ್ನು ನಾನು ಬಹಳ ತಾಳ್ಮೆಯಿಂದ ಕೇಳಿದೆ. ಅವರು ವಾದಮಾಡುವಾಗ ಏನೋ ಒಂದು ರೀತಿ ಮಾಡಿದರೇ ವಿನಾ ಇಲ್ಲಿ ಅವರಿಗಾಗಿರುವ ತೊಂದರೆಯೇನೆಂಬುದನ್ನು ಹೇಳುವುದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಇಂಥ ಒಂದು ಸ್ಥಿತಿಗೆ ತಂದಿರುವವರು ನಮ್ಮ ಮುಖ್ಯ ಮಂತ್ರಿಗಳೇ ಎಂದು ಹೇಳಿದರೆ ಯಾರೂ ಅನ್ಯಥಾ ಭಾವಿಸಬಾರದು. ಏಕೆಂದರೆ, ಅವರು ಈ ರಾಜ್ಯದ ಹಿತವನ್ನು ದಕ್ಷತೆಯಿಂದ ಹೋರಾಡಿ ಕಾಪಾಡಲಿಲ್ಲ ಎಂದು ನಾನು ಘಂಟಾಘೋಷವಾಗಿ ಹೇಳಬೇಕಾಗಿದೆ. ಇವತ್ತಿನ ಪರಿಸ್ಥಿತಿ ಏನಾಗಿದೆ ಎಂದರೆ, ಇಲ್ಲಿ ಎರಡು ತಿಂಗಳ ಕೆಳಗೆ ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆ ಸತ್ಯಾಗ್ರಹದ ಚಳವಳಿ ನಡೆಯಿತು. ಈ ದಿವಸ ಈ ಅಧಿವೇಶನವನ್ನು ಕೂಡ ಗಡಿ ವಿಚಾರದಲ್ಲಿ ಮೈಸೂರಿನ ಅಭಿಪ್ರಾಯ ತಿಳಿಸಲು ಕರೆದಿದ್ದಾರೆಂದು ನಾನು ಭಾವಿಸುತ್ತೇನೆ. ಇಂಥ ಒಂದು ಸಂದರ್ಭದಲ್ಲಿ ನಮ್ಮ ಮುಂದಿರುವ ನಿರ್ಣಯದ ಮೇಲೆ ಬರೀ ಅಸೆಂಬ್ಲಿಯಲ್ಲಿ ಮಾತನಾಡಿ ಮುಗಿಸಿದರೆ ಸಾಲದು. ಕಾರಣದಿಂದ ಕಾಂಗ್ರೆಸ್ ಸದಸ್ಯರು ನಾವು ಪ್ರಜಾಪ್ರಭುತ್ವ ಯುಗದಲ್ಲಿದ್ದೇವೆ, ಪ್ರತಿಯೊಬ್ಬ ವ್ಯಕ್ತಿಗೂ ಅವನ ಅಭಿಪ್ರಾಯವನ್ನು ತಿಳಿಸಲು ಅವಕಾಶ ಕೊಡಬೇಕಾದ್ದು ಅಗತ್ಯ ಎಂಬುದನ್ನು ತಿಳಿದುಕೊಂಡಿದ್ದಾರೆ ಎಂದು ನಾನು ಭಾವಿಸುತ್ತೇನೆ. ಈ ದಿವಸವಿರುವ ಹಾಗೆ ಯಾರೋ ಒಬ್ಬರು ಅವರ ನಾಯಕರು ಮಾಡಿದ ತಪ್ಪಿಗೆ ಗಮನಕೊಡದೆ ಪಕ್ಷದ ಮೀಟಿಂಗಿನಲ್ಲಿ ಏನೋ ರಾಜಕೀಯ ಮನೋಭಾವನೆಯಿಂದ ಬೇರೊಂದು ರೀತಿ ತಿರುಗಿದ್ದಾರೆ. ಎರಡು ತಿಂಗಳಿಂದಿದ್ದರು ಹುಮ್ಮಸ್ಸು ಇಂದು ಮಾಯವಾಗಿದೆ. ನಿಜಲಿಂಗಪ್ಪನವರನ್ನು ಉಳಿಸುವುದಕ್ಕೆ ಕಾಂಗ್ರೆಸ್ ಪಕ್ಷ ಈಗ ಪ್ರಯತ್ನಮಾಡುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ನಾನು ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ಸವಿನಯ ಪ್ರಾರ್ಥನೆ ಮಾಡುವುದೇನೆಂದರೆ, ಇದು ಒಬ್ಬ ವ್ಯಕ್ತಿಗೆ ಸಂಬಂಧಪಟ್ಟ ವಿಚಾರವಲ್ಲ, ರಾಜ್ಯದ 2 ಕೋಟಿ 30 ಲಕ್ಷ ಪ್ರಜಾಸಂಖ್ಯೆಗೆ ಸಂಬಂಧಪಟ್ಟಿರುವ ವಿಚಾರ. ಈ ರಾಜ್ಯದ ಮಾನ ಅವಮಾನ ಇದೆಲ್ಲಾ ಇಡೀ ಪ್ರಜೆಗಳಿಗೆ ಸಂಬಂಧಪಟ್ಟಿದೆ. ಹೀಗಿರುವಾಗ ಒಬ್ಬ ವ್ಯಕ್ತಿಯನ್ನು ಪೂಜೆ ಮಾಡುವುದು ಈ ಯುಗದಲ್ಲಿ ಸರಿಯಲ್ಲ ಎಂದು ಹೇಳಬಯಸುತ್ತೇನೆ. ದೊಡ್ಡಮೇಟಿಯವರು, ಹೂಲಿ ವೆಂಕಟರೆಡ್ಡಿಯವರು, ವಾಲಿ ಚನ್ನಪ್ಪನವರು, ನಮ್ಮ ಉಪಾಧ್ಯಕ್ಷರಾದ ಪಂಚಗಾವಿಯವರು, ಹಳ್ಳಿಕೇರಿಯವರು ಮುಂತಾದ ಘಟಾನುಘಟಿಗಳು ರಾಜ್ಯದ ಗಡಿ ಭದ್ರವಾಗಿರಬೇಕು ಎಂದು ಹೇಳುತ್ತಿದ್ದುದು ಇಂದು ಎಲ್ಲಿ ಹೋಯಿತು? ದೊಡ್ಡಮೇಟಿಯವರು ಭಾಷಣ ಬಹಳ ಸಪ್ಪೆಯಾಗಿತ್ತು.

4-30 P.M.

ಅದು ಈ ಸಂದರ್ಭಕ್ಕೆ ಉಚಿತವಾದ ಭಾಷಣವಲ್ಲ ಎಂದು ಬಹಳ ಮನನೊಂದು ಹೇಳುತ್ತಾ ಇದ್ದೇನೆ.

Mr. SPEAKER.—The member has no right to judge.

Sri T. N. MADAPPA GOWDA.—That is my opinion.

Mr. SPEAKER.—It is not good to do so on the floor of the House in the presence of other members at a time when I am presiding; I will not allow it. Suppose any member says that his speech is not good ?

Sri T. N. MADAPPA GOWDA.—He is entitled to say that.

Mr. SPEAKER.—The member might be so good, but let him not cast reflection upon others.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಇದು ಎಲ್ಲಿಗೆ ಮುಗಿಯುತ್ತದೆ ಎಂಬುದನ್ನು ನೋಡೋಣ. ಒಂದು ಸಾರಿ ಪಂಚಾಯ್ತಿಗೆ ಕೊಟ್ಟು ಅವರು ನಮ್ಮ ಎಲ್ಲಾ ವಿದ್ಯಮಾನಗಳನ್ನು ನೋಡಿ ಸೂಕ್ತವಾದ ತೀರ್ಮಾನವನ್ನು ಕೊಟ್ಟಮೇಲೆ, ಅದು ಸತ್ಯವೂ ತಪ್ಪೋ ಅದರಂತೆ ತೀರ್ಮಾನ ಮಾಡಿದ್ದಾಯಿತು. ಇವತ್ತು ನಮ್ಮ ಕನ್ನಡ ಜನ ನೀಲಗಿರಿಯಲ್ಲಿ, ಕೊಯಮುತ್ತೂರಿನಲ್ಲಿ, ಅನಂತಪುರ ಡಿಸ್ಟ್ರಿಕ್ಟಿನಲ್ಲಿ, ಸೋಲಾಪುರದಲ್ಲಿ ಇದ್ದಾರೆ. ಮರಾಠಿ ಪ್ರದೇಶದಲ್ಲೆಲ್ಲಾ ಕನ್ನಡ ಮಾತನಾಡತಕ್ಕ ಜನ ಲಕ್ಷಾಂತರ ಜನ ಇದ್ದಾರೆ. ಒಂದು ಅರ್ಥವಾಗದೇ ಇರತಕ್ಕ ಪ್ರಶ್ನೆ ಎಂದರೆ, ಈ ದೇಶ ಕನ್ಯಾಕುಮಾರಿಯಿಂದ ಹಿಮಾಚಲದವರೆಗೂ ಇರತಕ್ಕದ್ದೆಲ್ಲಾ ಒಂದೇ ಪ್ರದೇಶ, ಇಲ್ಲಿರತಕ್ಕ ಪ್ರಜೆಗಳೆಲ್ಲಾ ಒಂದೇ ಜನಾಂಗಕ್ಕೆ ಸೇರಿದವರು ಎಂದು ತಿಳಿದುಕೊಂಡಿರುವಾಗ ಮೈಸೂರಿನವರು ಬೇರೆ, ಆಂಧ್ರದವರು ಬೇರೆ, ಮಹಾರಾಷ್ಟ್ರೀಯರು ಬೇರೆ, ಪಂಜಾಬಿನವರು ಬೇರೆ ಎಂದು ಹೇಳುತ್ತಾ ಹೋದರೆ ಶ್ರೀಮಾನ್ ಶಿವಪ್ಪನವರು ಅವರ ಭಾಷಣದಲ್ಲಿ ಅಪ್ಪಣೆ ಕೊಡಿಸಿದ ಹಾಗೆ ಒಂದೊಂದು ಭಾಷೆಗೆ ಒಂದೊಂದು ರಾಜ್ಯವನ್ನು ಮಾಡುವುದು ಕಷ್ಟ. ಹೀಗಿರುವಾಗ ಮೈನಾರಿಟಿ ಕಮ್ಯೂನಿಟೀಸ್-ಅದು ಭಾಷೆಯಾಗಲಿ ಅಥವಾ ಮತ ಸಂಬಂಧವಾಗಲಿ-ಅವರಿಗೆ ಸರ್ವ ರಕ್ಷಣೆಯನ್ನೂ ಕೊಡತಕ್ಕ ಜವಾಬ್ದಾರಿ ಆ ಸರ್ಕಾರದ ಮೇಲೆ ಇರುತ್ತದೆ. ಹೀಗಿರತಕ್ಕ ಸಮಯದಲ್ಲಿ ನಾವು ಇಲ್ಲಿ ಹೋಗುತ್ತೇವೆ ಎಂದರೆ ಅದು ಬರೀ ಹುಚ್ಚಾಟ ಎಂದು ಹೇಳಬೇಕಾಗುತ್ತದೆ. ನಮಗೆ ಈಗ ಬಹಳ ಪ್ರಬಲವಾದ ಸನ್ನಿವೇಶಗಳು ಇವೆ. ಪಾಕೀಸ್ಥಾನ್ ಮತ್ತು ಚೈನಾದ ಧಾಳಿ ಸಂಭವ ಯಾವ ಘಳಿಗೆಯಲ್ಲೋ ಏನೋ ಏನ್ನುವಂತಹ ಸಂದರ್ಭದಲ್ಲಿ ಮೇಲಿಂದ ಮೇಲೆ ಈ ರೀತಿ ಕಚ್ಚಾಡುವುದು ಸರ್ವಥಾ ಕ್ಷೇಮಕರವಾದ ವಿಚಾರವಲ್ಲ. ಈ ದೇಶದಲ್ಲಿ ಹಿಂದೆ ಹೇಳಿದ್ದಾರೆ, ಚಪ್ಪನ (ಐವತ್ತಾರು) ದೇಶಗಳು ಇದ್ದವು ಎಂದು ; ಇವತ್ತು ನಮ್ಮ ರಾಜ್ಯಾಂಗದ ಪ್ರಕಾರ ಸಣ್ಣಪುಟ್ಟ ರಾಜ್ಯಗಳೂ ಸೇರಿ 18 ರಾಜ್ಯಗಳು ಇವೆ. ಚಪ್ಪನ್ (ಐವತ್ತಾರು) ರಾಜ್ಯಗಳನ್ನು ಮಾಡುವುದಕ್ಕೆ ಜನ ಈಗ ಹೊರಟಿದ್ದಾರೆ, ಈ ಜನಕ್ಕೆ ಒಂದು ಹಿಡಿತವನ್ನು, ಲಗಾಮನ್ನು ಹಾಕದಿದ್ದರೆ ಇಲ್ಲಿ ಯಾದವೀ ಕಲಹವಾಗುತ್ತದೆ. ಈ ದೇಶ ಗಳಿಸಿರತಕ್ಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾದ ಒಂದು ಸಂದರ್ಭ ಬರುತ್ತದೆ. ಮಹಾನ್ ರಾಷ್ಟ್ರಗಳೇ ಒಳಜಗಳಗಳಿಂದ ಕಾದಾಡುತ್ತಾ ಇವೆ, ಅಂತಹ ಸಂದರ್ಭದಲ್ಲಿ ಇದಕ್ಕೆ ಬೇಕಾದ ಪ್ರೋತ್ಸಾಹವನ್ನು ಅವು ಕೊಡುತ್ತವೆ ಎಂದು ಹೇಳುವುದರಲ್ಲಿ ತಪ್ಪಿಲ್ಲ. ಆ ರೀತಿ ಆಗಬಾರದು. ಈಗಾಗಲೇ ಶ್ರೀಮಾನ್ ಅಣಿಯವರು ವಿದರ್ಭದ ಮಾತನಾಡುತ್ತಾ ಇದ್ದಾರೆ, ನಮ್ಮ ಜನರಲ್ಲಿ ಮಹಾರಾಷ್ಟ್ರಕ್ಕೆ ಸೇರಿಕೊಂಡಿರುವಂತಹ ಜನ ಎರಡುಕಡೆಯುವರೂ ಇದ್ದಾರೆ. 20 ವರ್ಷದ ಹಿಂದೆ ಆ ಪ್ರದೇಶದಲ್ಲಿ ಒಂದು ಸೇರಿರತಕ್ಕ ಜನರ ಇಷ್ಟದ ಪ್ರಕಾರ ಈ ಚಳುವಳಿಯನ್ನು ಮಾಡತಕ್ಕ ಮನಸ್ಸನ್ನು ಅವರು ಮಾಡಿರುವಾಗ ನೂರಾರೂ ವರ್ಷಗಳಿಂದ ಇರತಕ್ಕ ಅಲ್ಲಿನ ಕನ್ನಡದ ಜನರ ಪರವಾಗಿ ಇನ್ನು ಎಷ್ಟುಮಟ್ಟಿಗೆ ಚಳುವಳಿಯನ್ನು ಮಾಡಬೇಕಾಗಬಹುದು ಎಂಬುದನ್ನು ಅವರು ಯೋಚನೆ ಮಾಡಬೇಕು. ನಾವು ಎಂತಹ ತಪ್ಪನ್ನು ಮಾಡಿದ್ದೇವೆ ! ಇದು ನಮ್ಮ ಮೈಸೂರಿನವರ ದೌರ್ಭಾಗ್ಯ. ಏನೇ ಆಗಲಿ You leave it to the Leader. He will decide it ಎಂದು ಹೇಳಿದರು. ಅವರು decided ಮಾಡಿದ್ದಾದರೂ ಏನೂ ? ಅವರು ಹೇಳಿದ್ದನ್ನು ಕೇಳಿಕೊಂಡು ಬಂದರೇ ವಿನಾ ಬಾಕಿಯವರ ಜೊತೆಗೆ ಸಮಸಮ ಎಂದು ಹೋರಾಡತಕ್ಕ ಚಾಕಚಕ್ಯತೆ ಆಗಲಿ ಶಕ್ತಿಯಾಗಲಿ ನಮ್ಮ ಸಭಾನಾಯಕರಿಗೆ ಇಲ್ಲ ಎಂದು ಘಂಟಾಘೋಷವಾಗಿ ಹೇಳಬಯಸುತ್ತೇನೆ. ಒಂದು ಗಾದೆ ಇದೆ, ಬಹಳ ಚೆನ್ನಾಗಿದೆ ಅದು ಶ್ರೀಮಾನ್ ನಿಜಲಿಂಗಪ್ಪನವರ ವಿಷಯದಲ್ಲಿ ಬಹಳ ಚೆನ್ನಾಗಿ ಅನ್ವಯವಾಗುತ್ತದೆ ಅದೇನೆಂದರೆ : 'ಮೈ ಎಲ್ಲಾ ಅಪರಂಜಿಯಂತೆ, ಕಿವಿ ಹಿತ್ತಾಳೆಯಂತೆ.' ಅವರು ಈ ದೇಶದ ನಾಯಕರಾಗುವುದಕ್ಕೆ ನಾಲಾಯಕ್ಕು ಎಂದು ಹೇಳುತ್ತೇನೆ. ಇಂತಹ ಸಮಯದಲ್ಲಿ ಇದು ತಮ್ಮ ಎಂದು ಜವಾಬ್ದಾರಿ ಹೇಳಿ ಅವರೇ ಈ ಜವಾಬ್ದಾರಿಯನ್ನು ಏಕೆ ಹೊತ್ತುಕೊಳ್ಳಬೇಕು ಎಂದು ಕೇಳುತ್ತೇನೆ. ಈ ಸಭೆಯಲ್ಲಿ 208 ಜನ ಸದಸ್ಯರು ಇದ್ದಾರೆ ಇಷ್ಟು ಜನರ ಜವಾಬ್ದಾರಿಯನ್ನು ಒಬ್ಬ ವ್ಯಕ್ತಿಯು ಹೊರಬೇಕಾದ್ದು ಅನಾವಶ್ಯಕ. ಈ ಸಭೆಯ ತೀರ್ಮಾನಕ್ಕೆ, ಈ ಸಭೆಯು ಕೊಡತಕ್ಕ ಒಂದು ಕಟ್ಟುನಿಟ್ಟಾದ ನಿರ್ಣಯಕ್ಕೆ ಅವರು ತಲೆಬಾಗಬೇಕು ಅದರಂತೆ ಮುಂದೆ ನಡೆದುಕೊಂಡು ಹೋಗಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಆಗುತ್ತಾ ಇರುವುದೇನೆಂದರೆ, ನಮ್ಮ ಕನ್ನಡ ನಾಡಿಗೆ ಒದಗಿರತಕ್ಕ ಇಂಥ ಒಂದು ದುಸ್ಥಿತಿಯಲ್ಲಿ ನಾಟಕವಾಡುವುದಕ್ಕೆ ಕಾಂಗ್ರೆಸ್‌ನವರು ಪ್ರಯತ್ನ ಮಾಡುತ್ತಾ ಇದ್ದಾರೆ ಎಂದರೆ ತಪ್ಪಾಗಲಾರದು. ದಾವಣಗೆರೆ, ಹರಿಹರದಲ್ಲಿ ಆದ ಗೋಲೀಬಾರಿನಲ್ಲಿ ಸಂಬಂಧಪಡದೇ ಇರತಕ್ಕ ಯಾರೋ ಒಬ್ಬ ವಿದ್ಯಾರ್ಥಿ ಗುಂಡಿಗೆ ಆಹುತಿಯಾದರು. ಈಗ ಮತ್ತೆ ಮತ್ತೆ ದೇಶವನ್ನು ವಿಭಜನೆ ಮಾಡತಕ್ಕ ನೀತಿಯನ್ನು ಅನುಸರಿಸುತ್ತಾ ಹೋಗುವುದು ಸೂಕ್ತವಲ್ಲ. ಈ ಸಭೆಯಲ್ಲಿ ಹಿಂದೆ ಈಗಾಗಲೇ ನಮ್ಮಲ್ಲಿ ಅನೇಕರು ಹೇಳುತ್ತಾ ಇದ್ದರು : ಉತ್ತರ ಕರ್ನಾಟಕದಿಂದ ಬಂದಿರತಕ್ಕವರು ಮಹಾರಾಷ್ಟ್ರೀಯರಷ್ಟೆ ಹಟಮಾರಿ ಸ್ವಭಾವದ ಜನ ಎಂದು. ಅವರು ಹಟಮಾರಿ ಸ್ವಭಾವದ

(ಶ್ರೀ ಟಿ. ಎನ್. ಮಾದಪ್ಪ ಗೌಡ)

ಜನ ಇರುವುದರಿಂದ ಹಳೇ ಮೈಸೂರಿನವರು ನಾವು ಹಿಂದೆ ಇದ್ದ ಹಾಗೆಯೇ ಇರುತ್ತೇವೆ, ತುಂಗ ಭದ್ರೆಯಿಂದ ಈಚೆಗೆ ನಮ್ಮ ರಾಜ್ಯವನ್ನು ನಮಗೆ ಬಿಟ್ಟುಬಿಡಿ, ನಮಗೆ ಯಾವ ಗಡಿಯ ತೊಂದರೆಯೂ ಇಲ್ಲ. ನಮ್ಮ ರಾಜ್ಯವನ್ನು ನಾವು ಬಹಳ ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತೇವೆ ಎಂದು ಆಗಲೇ ಹೇಳಿದ್ದೇವೆ. ಮತ್ತೆ ಈಗ ಅದನ್ನು ಹೇಳಬೇಕಾಗುತ್ತದೆ. ಏಕೆಂದರೆ ಶ್ರೀಮಾನ್ ಅಣೆಯ ವರು ಹೇಳುತ್ತಾ ಇದ್ದಾರೆ ಮಹಾರಾಷ್ಟ್ರದ ರಕ್ತ ಅಣೆಯವರ ನಾರನಾಡಿಯಲ್ಲಿ ಹರಿಯುತ್ತಾ ಇದೆ. ನಾಡನ್ನು ಹಂಚಿಹಾಕುತ್ತಾ ಇರುವಾಗ ಹಳೇ ಮೈಸೂರಿನ ಕೇಳಿಕೆಯನ್ನೂ ಕೂಡ ಇದೇ ಸಮಯ ದಲ್ಲಿ ಇಡಬೇಕಾಗುತ್ತದೆ. 1656 ನೇ ನವೆಂಬರ್ ಒಂದನೆಯ ತಾರೀಖು ಒಂದು ತೀರ್ಮಾನ ವಾಯಿತು ಆ ತೀರ್ಮಾನಕ್ಕೆ ಕಟ್ಟುಬೀಳುವುದಾದರೆ ಅದನ್ನು ಒಪ್ಪಿಕೊಳ್ಳುತ್ತೇವೆ, ಅದನ್ನು ಒಪ್ಪದೇ ಇದ್ದರೆ ಒಂದು ಕಡೆಯಿಂದ ಎಲ್ಲವನ್ನೂ ಹಂಚಿ, ಇವತ್ತಲ್ಲ ನಾಳೆ ಅದನ್ನು ಮಾಡಲೇಬೇಕಾಗುತ್ತದೆ. ಮೈಸೂರು ಸೀಮೆಯಲ್ಲಿರತಕ್ಕ ಲಿಂಗಾಯಿತರು ಒಂದು, ಒಕ್ಕಲಿಗರು ಒಂದು, ಮುಸಲ್ಮಾನರು ಒಂದು ಈ ರೀತಿ ಹರಿದು ಹಂಚಿ ಹಾಕಬೇಕಾಗುತ್ತದೆ. ಎಷ್ಟೋ ಜನ ಹುತಾತ್ಮರಾಗಿ ದೇಶಕ್ಕೆ ಸ್ವಾತಂತ್ರ್ಯವನ್ನು ತಂದು ಕೊಟ್ಟರು ಅದು ಸಾರ್ಥಕವಿಲ್ಲದೇ ಹೋಗುವುದನ್ನು ಕಣ್ಣಾರೆ ನೋಡ ತಕ್ಕ ಒಂದು ಪಾಪವನ್ನು ತಾವು ಮಾಡಿದ್ದೇವೆ. ಇದನ್ನೆಲ್ಲಾ ನಾವು ನೋಡಬೇಕಾಗಿದೆ ಎಂದು ಹೇಳ ನನಗೆ ಅನಿಸುತ್ತಾ ಇದೆ. ಎಷ್ಟುಮಟ್ಟಿಗೂ ಕೂಡ ಈಗ ಇರತಕ್ಕ ಗಡಿಯನ್ನು ಯಾವುದೇ ರೂಪದಲ್ಲಿ ಮಾರ್ಪಾಡುಮಾಡುವುದಕ್ಕೆ ನಾವು ಒಪ್ಪುವುದಿಲ್ಲ, ಅದಕ್ಕೆ ಏಕ ಸದಸ್ಯ ಆಯೋಗ ಬೇಕಾ ಗಿಲ್ಲ. 3-4 ಜನರನ್ನೊಳಗೊಂಡ ಕಮಿಷನ್ ಮಾಡಲಿ ಎಂದು ಕೆಲವರು ಹೇಳಿದರು ಅದೂ ಕೂಡ ನಮಗೆ ಬೇಡ It is already a settled fact. There is no point in reopening this question. ಸುತ್ರಾಂ ನಾವು ಮೈಸೂರಿನ ಜನ ಈಗ ಯಾವ ಒಂದೇ ಸಲಹೆ ಇದೆ ಅದನ್ನಾ ಗಲಿ ಅಥವಾ ಮುಖ್ಯ ಮಂತ್ರಿಗಳ ಮನೋಭಾವವನ್ನು ಉಳಿಸುವುದಕ್ಕೆ ತಯಾರಾಗಿಲ್ಲ, ನಮ್ಮ ಗಡಿ ಪ್ರದೇಶದಲ್ಲಿ ಒಂದು ಅಂಶವನ್ನೂ ಕೂಡ ಬಾರಿಯವರಿಗೆ ಹೋಗದಂತೆ ರಕ್ಷಣೆ ಮಾಡಿಕೊಂಡು ಬರತಕ್ಕ ಜವಾಬ್ದಾರಿ ನಮಗೆ ಇದೆ. ಆದ್ದರಿಂದ ಮಾನ್ಯ ಸಭೆಯ ಸದಸ್ಯರೆಲ್ಲರೂ ಕೂಡ ಏಕ ಮನಸ್ಸಿನಿಂದ ಈ ಗಡಿ ಹೇಗೆ ಇದೆಯೋ ಹಾಗೆಯೇ ಇರಬೇಕು, ಇಲ್ಲದೇ ಹೋದರೆ ಅದರಿಂದ ಬಹಳ ದುಷ್ಪರಿಣಾ ಮವಾಗುತ್ತದೆ ಎಂಬುದನ್ನು ತಿಳಿದುಕೊಂಡು ಮುಂದಿನ ತೀರ್ಮಾನ ಕೈಕೊಳ್ಳಬೇಕೆಂದು ಹೇಳು ತ್ತೇನೆ. ಗಡಿ ಪ್ರಶ್ನೆ ತೆಗೆದುಕೊಂಡದ್ದೇ ಆದರೆ ದೊಡ್ಡ ಚಳುವಳಿಯೇ ಮತ್ತೆ ದೇಶದಲ್ಲಿ ಆಗುತ್ತ ದೆಯೋ ಏನೋ ಅದನ್ನು ಊಹೆಗೆ ಬಿಟ್ಟುಬಿಡೋಣ. ಇದರಲ್ಲೇ ನಾವು ತಲ್ಲೀನರಾದ ಪಕ್ಷದಲ್ಲಿ ಪಾಕೀಸ್ತಾನ್, ಮತ್ತು ಚೈನಾದವರೊಡನೆ ಹೋರಾಡುವುದಕ್ಕೆ ಆಗುವುದಿಲ್ಲ, ನಮ್ಮ ನಮ್ಮ ಯಾದವೀಕಲಹದಲ್ಲೇ ಇದು ಸಮಾಪ್ತವಾಗುತ್ತದೆ ಎಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವಿ. ಶೆಟ್ಟಿ (ಚಿಕೋಡಿ).—ಮಾನ್ಯ ಅಧ್ಯಕ್ಷರೇ, ಈಗಾಗಲೇ ದೇಶದಲ್ಲಿ ಸಾಕಷ್ಟು ಸಮಸ್ಯೆಗಳಿರುವಾಗ ಅವುಗಳನ್ನು ಮಹತ್ವದವುಗಳಿದ್ದರೂ ಅವನ್ನು ಬದಿಗೊತ್ತಿ ಈ ಗಡೀಸಮಸ್ಯೆಯ ಚರ್ಚೆಗಾಗಿ 3 ದಿವಸಗಳಿಂದಲೂ ಕಾಲ ಕಳೆಯುತ್ತಿದ್ದೇವೆ. ನಿಜವಾಗಿಯೂ ನೋಡುವುದಾದರೆ, ಈ ದಿವಸ ಸಾಮಾನ್ಯ ಜನರು ಅವರು ಇತ್ತಕಡೆಯವರಾಗಲೀ, ಅತ್ತಕಡೆಯವರಾಗಲೀ ನೂರಕ್ಕೆ 60 ರಷ್ಟು ಜನರು ಹೊಟ್ಟೆ ಪ್ರಶ್ನೆಯನ್ನು ಅಥವಾ ಅವರ ಒಂದು ಕೂಳಿನ ಪ್ರಶ್ನೆಯನ್ನು ಮುಖ್ಯವಾಗಿ ಕಾಣುತ್ತಿದ್ದಾರೆಯೇ ವಿನಾ ಅವರುಗಳಿಗ್ಯಾರಿಗೂ ಈ ಗಡೀ ಪ್ರಶ್ನೆ ಎಂದರೇನೆಂಬುದೇ ತಿಳಿಯದು. ನಾವು ಈ ದಿವಸ ಇದನ್ನೊಂದು ಗಡೀ ಸಮಸ್ಯೆಯೆಂದು ಕರೆಯತಕ್ಕದ್ದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಇಡೀ ರಾಷ್ಟ್ರಕ್ಕೆ ಇರತಕ್ಕ ಗಡೀ ಒಂದೇ ರಾಜ್ಯಗಳ ಮಧ್ಯ ಇಂಥ ಒಂದು ಪ್ರಸಂಗ ಬರಬಾರದಾಗಿತ್ತು. ಈ ದಿವಸ ಮಹರಾಷ್ಟ್ರದವರ ಕೇಳಿಕೆಯಂತೆ ರಾಜ್ಯದ ಹೊರಗಡೆ ಉಳಿದಿರತಕ್ಕ ಕೆಲವು ಕನ್ನಡ ಭಾಗದ ಜನರೂ ಈಗ ಒಳಕ್ಕೆ ಬರಬೇಕೆಂದು ಕೇಳುತ್ತಿದ್ದಾರೆ. ಹೀಗೆ ಜನರನ್ನು ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾಯಿಸಲು ಅವಕಾಶವಿರುವುದಿಲ್ಲ. ಏಕೆಂದರೆ, ಈ ಪ್ರಶ್ನೆ ಈ ಹಿಂದೆಯೇ ಮುಗಿದುಹೋಗಿದೆ. ಆದುದರಿಂದ ಈಗೊಮ್ಮೆ ನಾವೇನು ಈ ಬಗ್ಗೆ ನಿರ್ಣ ಯವನ್ನು ಮಾಡಿದ್ದೇವೋ ಅದನ್ನು ಪುನಃ ಬದಲಾಯಿಸಬಾರದೆಂದು ನಾನು ಹೇಳುತ್ತೇನೆ. ಏಕೆಂದರೆ, ನಾವೀಗ ಇರತಕ್ಕ ದೇಶ ಒಂದು ಸೆಕ್ಯುಲರಿಜಂ ನೇಮದಲ್ಲಿ ಇರುವಂಥದ್ದಾಗಿದೆ. ಇಂಥ ಒಂದು ನೇಮವನ್ನು ನಾವು ಪಾಲಿಸುತ್ತಿರುವುದರಿಂದ ಒಂದು ರಾಜ್ಯದಲ್ಲಿರತಕ್ಕ ಜನರು ಇನ್ನೊಂದು ರಾಜ್ಯಕ್ಕೆ ಇಷ್ಟಪಟ್ಟಲ್ಲಿ ಅವರು ಇಷ್ಟ ಬಂದಕಡೆಗೆ ಹೋಗಬಹುದು, ಅದಕ್ಕೆ ಯಾರೂ ಅಡ್ಡಬರ ಲಾರರು. ಅನೇಕರಿಗೆ ಈ ವಿಚಾರ ಗೊತ್ತಿದ್ದರೂ, ತಾವು ಎಲ್ಲಿದ್ದರೂ ಒಂದೇ ಎಂಬ ವಿಚಾರ ಅವರಿಗೆ ಚೆನ್ನಾಗಿ ಮನವರಿಕೆಯಾಗಿದ್ದರೂ ಒಮ್ಮೊಮ್ಮೆ ಅವರಲ್ಲಿ ಒಂದು ಭಾವನೆ ಇಣಕು ಹಾಕಿ ನಾವು ಈ

ರಾಜ್ಯಕಿಂತ ಆ ರಾಜ್ಯದಲ್ಲಿದ್ದರೇ ಚೆನ್ನಾಗಿತ್ತು ಎಂಬ ಅಭಿಪ್ರಾಯ ಬರುತ್ತದೆ. ಈ ಪ್ರಜಾತಂತ್ರದಲ್ಲಿ ಹಾಗೆ ಜನರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸೇರಬಯಸಿದರೆ ಅದನ್ನು ನೆರವೇರಿಸು ವುದಕ್ಕೆ ಅವಕಾಶವಿದೆ. ಇಂದು ನಮ್ಮಲ್ಲಿರತಕ್ಕ ಕೆಲವು ಜನರ ಮನಸ್ಸು ಹೊರಗಡೆಗೆ ಹೋಗ ಬೇಕೆಂದು ಆಶೆಪಡುತ್ತಿದ್ದರೆ ನಾವು ಅಂಥವರನ್ನು ಬಿಟ್ಟುಕೊಡಬಹುದು. ಆದರೆ ಅದೇರೀತಿ ರಾಜ್ಯದ ಹೊರಗಡೆ ಇರತಕ್ಕ ಕೆಲವರು ಈಗ ಒಳಕ್ಕೆ ಬರಲು ಆಶೆಪಡುತ್ತಿದ್ದಾರೆ. ಈಗ ಅಂಥವರಿಗೂ ಅವಕಾಶ ಇರಬೇಕು. ಆದರೆ ಅವರು ಒಳಕ್ಕೆ ಬರಬೇಕಾದರೆ ಅಲ್ಲಿರತಕ್ಕವರು ಬಿಟ್ಟುಕೊಟ್ಟರೆ ತಾನೆ ಅವರು ಬರಲಿಕ್ಕೆ ಸಾಧ್ಯ ? ಹಾಗೆ ಹೊರಗಿರತಕ್ಕ ಕನ್ನಡಿಗರನ್ನು ಒಳಕ್ಕೆ ಬರಲು ಅಲ್ಲಿರತಕ್ಕವರು ಬಿಟ್ಟುಕೊಡಬೇಕು ಇಲ್ಲವೇ ನಾವು ಅವರನ್ನು ಬಿಟ್ಟುಕೊಡಿ ಎಂದು ಕೇಳಬೇಕು. ಅವರು ನಾವು ಕೇಳಿದ್ದಕ್ಕೆ ಒಡಂಬಟ್ಟರೆ ಸರಿ, ಇಲ್ಲದಿದ್ದರೆ ಈ ಪ್ರಶ್ನೆ ಬಹಳ ಕಷ್ಟಕ್ಕೆ ಬರುತ್ತದೆ. ಆದರೆ ಈ ದಿವಸ ಹೊರ ನಾಡಿನಲ್ಲಿ ಎಲ್ಲೆಲ್ಲಿ ಕನ್ನಡಿಗರಿದ್ದಾರೋ ಅವರನ್ನೆಲ್ಲಾ ನಾವು ಒಳಕ್ಕೆ ಕರೆಯಲು ಅವಕಾಶ ವಿಲ್ಲ. ಆದುದರಿಂದ ನಾವು ಈ ದಿವಸ ಈ ಮಹಾರಾಷ್ಟ್ರೀಯರನ್ನೂ ಬಿಟ್ಟರೆತಾನೇ ಅವರು ಹೊರಗೆ ಹೋಗಲು ಅವಕಾಶವಾಗುವುದು ? ಹೀಗೆ ಈ ಪ್ರಶ್ನೆಯನ್ನು ನಾವು ನಾವೇ ಬಗೆಹರಿಸಿಕೊಳ್ಳಲು ಅವಕಾಶವಿರುವುದರಿಂದ ಇದಕ್ಕೆ ಏತಕ್ಕೆ ಒಂದು ಏಕ ಸದಸ್ಯ ಸಮಿತಿ ಬೇಕು ? ಇದು ಇರಬೇಕೆಂದು ನನಗೆ ಅನಿಸುವುದಿಲ್ಲ. ಈ ಪ್ರಶ್ನೆಯನ್ನು ಎರಡೂ ರಾಜ್ಯದ ಮುಖ್ಯ ಮಂತ್ರಿಗಳು ಒಂದು ಒಡಂಬಡಿಕೆಗೆ ಬಂದು ನಮಗೆ ಬರುವುದನ್ನು ನಾವು ತಗೆದುಕೊಂಡು ಅವರಿಗೆ ಕೊಡತಕ್ಕದ್ದನ್ನು ಅವರಿಗೆ ಕೊಡ ಬಹುದು. ಇದು ನ್ಯಾಯವಾಗಿ ಇರತಕ್ಕ ಮಾರ್ಗ. ಇಷ್ಟಕ್ಕಾಗಿ ಒಂದು ಚಳಿವಳಿಯನ್ನು ಮಾಡು ವುದು ಸರಿಯೆಂದು ನನಗೆ ಕಾಣುವುದಿಲ್ಲ. ಆದರೆ ಈ ಹಿಂದೆ ನಾವೂ ಸಹ ಒಂದು ರೀತಿಯಲ್ಲಿ ಚಳಿವಳಿಯನ್ನು ಮಾಡಿಯೇ ಈ ದಿವಸ ಇಲ್ಲಿ ಬಂದು ಕುಳಿತಿದ್ದೇವೆ. ನಾವು ಈ ದಿವಸ ಯಾವುದೇ ಒಂದು ವಿಷಯನ್ನು ಚರ್ಚೆ ಮಾಡಿದರೂ. ಅಲ್ಲಿ ಉಂಟಾಗಿರತಕ್ಕ ಸಮಸ್ಯೆಯನ್ನು ಬಿಡಿಸಬೇಕು ಎಂಬ ಮನೋಭಾವದಿಂದ ನಾವು ಚರ್ಚೆಮಾಡಬೇಕಾದ್ದು ಬಹಳ ಮುಖ್ಯವಾದ ವಿಷಯ. ಈಗ ಇರತಕ್ಕ ಲೋಕಶಾಹಿಯ ಒಂದು ತಂತ್ರದಲ್ಲಿ ಸಮಸ್ಯೆಗಳು ಇದ್ದೇ ಇರುತ್ತವೆ, ಅವುಗಳನ್ನು ನಾವು ನಾವು ಸಹಕರಿಸಿ ಬಿಡಿಸಿಕೊಳ್ಳಬೇಕು ; ಅದಕ್ಕಾಗಿ ವಿಚಾರಗಳನ್ನು ಕೂಡಿ ನಡೆಸಬೇಕಾಗಿದೆ. ಇಂದಿಗೆ ರಾಜ್ಯ ಗಳ ಪುನರ್ವಿಂಗಡಣೆಯಾಗಿ 10 ವರ್ಷಗಳಾಯಿತು. ಈ ದಿವಸ ನಮ್ಮ ರಾಜ್ಯದ ಕಡೇ ಸರಹದ್ದಿ ನಲ್ಲಿರತಕ್ಕ ಕಾಸರಗೋಡಿನವರು ಇಲ್ಲಿಗೆ ಬರಬೇಕೆಂದು ಆಸೆಪಡುತ್ತಿದ್ದಾರೆ. ಅವರಹಾಗೇ ನಮ್ಮಲ್ಲಿರ ತಕ್ಕ ಕೆಲವು ಪ್ರದೇಶದ ಜನರು ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಆಶೆಪಡುತ್ತಿದ್ದಾರೆ. ಆದರೆ ಮೊನ್ನೆ ಮುಂಬೈನಲ್ಲಿ ನಡೆದ ಮೀಟಿಂಗಿನಲ್ಲಿ ನಮ್ಮ ರಾಜ್ಯದಿಂದ ಮಹಾರಾಷ್ಟ್ರಕ್ಕೆ ಸೇರತಕ್ಕ ಪ್ರದೇಶ ಗಳು ಮಾತ್ರ ಜೀವಂತವಿನ್ನು ಇನ್ನುಳಿದವು ಜೀವಂತದಿಂದಿಲ್ಲ ಎಂದು ಹೇಳಲಾಗಿದೆ. ಈ ದಿವಸ ಯಾವ ಒಂದು ಪ್ರಶ್ನೆ ಜೀವಂತದಿಂದ ಉಳಿದಿಲ್ಲವೋ ಅಂಥ ಒಂದು ಪ್ರಶ್ನೆಗೆ ಆ ಏಕ ಸದಸ್ಯ ಅಯೋಗರಚಿಸಿ ಜೀವವನ್ನು ತುಂಬಲು ಹೊರಟಿದೆ. ಆ ಆಯೋಗದಲ್ಲಿ ಏಕ ಸದಸ್ಯರೇ ಇರಲೀ ಅಥವಾ ಬಹುಮಂದಿ ಸದಸ್ಯರೇ ಇರಲೀ ಇದನ್ನು ಅಂತಹ ಸಮಿತಿಗಳು ತೀರ್ಮಾನ ಮಾಡಲಾರವು. ಇದನ್ನೇನಿದ್ದರೂ ಉಭಯರಾಜ್ಯಗಳ ಮುಖ್ಯ ಮಂತ್ರಿಗಳೂ ಒಂದು ಕಡೆ ಸೇರಿ ಒಂದು ಅನ್ಯೋನ್ಯ ಭಾವನೆಯಿಂದ, ಪ್ರೇಮದಿಂದ ಕೆಲಸಮಾಡಬೇಕೇ ವಿನಾ ಇದನ್ನು ಒಂದು ಅಭಿಮಾನಕ್ಕೆ ಕಟ್ಟುಬಿದ್ದು ಮಾಡುತ್ತೇ ವೆಂದರೆ ಖಂಡಿತಾ ಸಾಧ್ಯವಿಲ್ಲ. ಆ ದೇಶಾಭಿಮಾನ, ಕ್ಷಾತ್ರತೇಜಸ್ಸು ಅನ್ನುವುದು ಎಲ್ಲರಲ್ಲೂ ಇದೆ, ಆದರೆ ಯಾರ್ಯಾರಲ್ಲಿ ಎಷ್ಟಿದೆ ಎಂಬುದನ್ನು ತೂಕ ಹಾಕಬೇಕಾಗಿಲ್ಲ. ಈ ಒಂದು ಸೋಗಿನಲ್ಲಿ ಯಾರೂ ಕುಲ ಅಥವಾ ಜಾತಿಗಳನ್ನು ಎತ್ತಿಹಿಡಿಯಲು ಸೆಕ್ಯುಲರಿಜಂನಲ್ಲಿ ಅವಕಾಶವಿಲ್ಲ. ಈ ಹಿಂದೆ ಒಮ್ಮೆ ನಾನು ಜೋನಲ್ ಕೌನಿಸಿಲ್ ಇರಬೇಕು ಅದಕ್ಕೆ ಈ ಎಲ್ಲಾ ರಾಜ್ಯಗಳ ಆಡಳಿತವನ್ನೂ ವಹಿಸ ಬೇಕು ಎಂದು ಹೇಳಿದ್ದೆ. ಯಾರೇ ಆಗಲಿ ಈ ದಿವಸ ಗೊಂದಲಮಾಡಿದರೇನೂ ಪ್ರಯೋಜನವಿಲ್ಲ. ಅದಕ್ಕೆ ಬದಲಾಗಿ ಉಭಯತ್ರರೂ ಒಂದು ಕಡೆ ಒಟ್ಟಾಗಿ ಸೇರಿ ಒಬ್ಬರ ಅಭಿಪ್ರಾಯವನ್ನು ಮತ್ತೊಬ್ಬರು ಅರಿತುಕೊಂಡು ಇದನ್ನು ತೀರ್ಮಾನ ಮಾಡಿಕೊಳ್ಳುವುದು ಒಳ್ಳೆಯದು ಎಂದು ನಾನು ಹೇಳುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಸುಶೀಲಾಬಾಯಿ ಹಿರಾಚಂದ್ ಷಾ (ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ, ಈ ಗಡೀ ಸಮಸ್ಯೆಯು ನಡೆಸುತ್ತಿರುವ ಚಳುವಳಿಯನ್ನು ನೋಡಿ ನನ್ನ ಮನಸ್ಸಿಗೆ ಬಹಳ ದುಃಖವಾಗಿದೆ. ನಾವೆಲ್ಲರೂ ಒಂದು ದೇಶದಲ್ಲಿರತಕ್ಕವರು, ನಾವೆಲ್ಲರೂ ಇರತಕದ್ದು ಭಾರತದೇಶ ಒಂದೇ ನಮಗೆ ಇರತಕ್ಕ ಶತೃಗಳೆಂದರೆ ಚೀಣೀಯರು ಮತ್ತು ಪಾಕೀಸ್ತಾನೀಯರು. ಅವರು ನಮಗೆ ಈಗ ಗಡಿಯಲ್ಲಿ ತೊಂದರೆ ಕೊಡಲಿಕ್ಕೆ ಹತ್ತಿದ್ದಾರೆ. ನಾವೆಲ್ಲರೂ ನ್ಯಾಯವಾಗಿ ಅವರ ಮೇಲೆ ಲಡಾಯಿ ಮಾಡಬೇಕು. ಅವರ ಮೇಲೆ ಲಡಾಯಿ ಮಾಡುವುದನ್ನು ಬಿಟ್ಟು ಇಲ್ಲಿ ಒಂದೇ ಮನೆಯಲ್ಲಿರತಕ್ಕವರು ಹೀಗೆ ಜಗಳ ಮಾಡತಕ್ಕದ್ದು ಬಹಳ ಹೀನಾಯ. ನಾವು ಈ ಹಿಂದೆ ಮುಂಬೈ ರಾಜ್ಯದಲ್ಲೇ ಇದ್ದು ಇಲ್ಲಿಗೆ 10 ವರ್ಷಗಳ ಕೆಳಗೆ ರಾಜ್ಯಗಳು ಪುನರ್ವಿಂಗಡಣೆಯಾದನಂತರ ಕರ್ಣಾಟಕಕ್ಕೆ ಸೇರಿದೆವು.

(ಶ್ರೀಮತಿ ಸುಶೀಲಾಬಾಯಿ ಹೀರಾಚಂದ್ ಷಾ)

ಆದರೆ ನಮ್ಮ ಕನ್ನಡ ನಾಡಿಗೆ ಬರಬೇಕಾದ ಕೆಲವೊಂದು ಭಾಗಗಳು ಇನ್ನೂ ಮಹಾರಾಷ್ಟ್ರದಲ್ಲೇ ಉಳಿದಿವೆ. ಸೋಲಾಪುರದಲ್ಲಿ ಅರ್ಧಕ್ಕೂ ಹೆಚ್ಚುಮಂದಿ ಕನ್ನಡ ಮಾತನಾಡತಕ್ಕವರಿದ್ದಾರೆ. ಹಾಗೇ ಆ ಅಕ್ಕಲುಕೋಟೆ, ಜತ್ತು ಪ್ರದೇಶಗಳೆಲ್ಲಾ ನಮಗೆ ಸೇರಬೇಕು. ಈ ಹಿಂದೆ ಅಕ್ಕಲುಕೋಟೆಯ ಮಹಾರಾಣಿಯವರು ನನ್ನ ಮನೆಗೆ ಬಂದಿದ್ದರು. ಅವರೂ ಕೂಡ ಅಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಕನ್ನಡ ಮಾತನಾಡತಕ್ಕವರಿದ್ದಾರೆಂದು ಹೇಳಿದ್ದಾರೆ. ಆ ಜತ್ತಿನಲ್ಲಿರತಕ್ಕ ಜನರು ಅವರನ್ನು ಕರ್ಣಾಟಕಕ್ಕೆ ಸೇರಬೇಕೆಂದರೆ ಮಹಾರಾಷ್ಟ್ರದವರು ಬಿಟ್ಟುಕೊಡಲಿಲ್ಲ ಎಂದು ಅಲ್ಲಿ ನಡೆದ ಚುನಾವಣೆಯಲ್ಲಿ ಅವರು ತಮ್ಮ ಮತಗಳನ್ನೇ ಚಲಾಯಿಸಲಿಲ್ಲ. ನಾವು ಯಾವುದೇ ಒಂದು ದೃಷ್ಟಿಯಿಂದ ನೋಡಿದರೂ ಸಹಿತ ಆ ಕೇಲ್ಕರ್ ಸಮಿತಿ ವರದಿಯಲ್ಲೂ ಕಾರ್ವಾರ ಪೂರ್ಣವಾಗಿ ಕರ್ಣಾಟಕದ್ದು ಎಂದು ಹೇಳಿದ್ದಾರೆ. ಅದರಂತೆ ಈ ದಿವಸ ಅದು ಇಲ್ಲಿಗೆ ಸೇರಿದೆ. ಇದನ್ನೆಲ್ಲಾ ತಿಳಿದೂ ತಿಳಿದು ಮಹಾರಾಷ್ಟ್ರೀಯರು ಹೀಗೆ ಮಾಡತಕ್ಕದ್ದು ಖಂಡಿತ ಸರಿಯಾದುದಲ್ಲ. ಶತ್ರುಗಳ ಮೇಲೆ ಮಾಡತಕ್ಕ ಜನಗಳವನ್ನು ಮನೆ ಒಳಗೆ ಮಾಡಲಿಕ್ಕೆ ಹತ್ತಿದ್ದಾರೆ ಇದು ಯೋಗ್ಯವಾದ್ದಲ್ಲ. ನಾನು ಏತಕ್ಕಾಗಿ ಇದನ್ನು ಹೇಳುತ್ತೇನೆ ಎಂದರೆ, ಒಬ್ಬರಿಗೊಬ್ಬರು ಇದರ ಬಗ್ಗೆ ಜಗಳಮಾಡಲು ಹೋಗಬಾರದು. ಈಗ ಬೊಂಬಾಯಿಯಲ್ಲಿರುವ "ರಾಮು" ಜನ ಸಹಿತ ಗುಜರಾಥಿ ಮಾತಾಡುತ್ತಾರೆ. ಅಂದರೆ ಮುಂಬಯಿ ಗುಜರಾಥಿಗೆ ಏಕೆ ಸೇರಿಸಬಾರದು ? ಗುಜರಾಥದಲ್ಲಿ ಸೇರಿದ ಬಡೋಡಾ ಮರಾಠೀ ಸಂಸ್ಥಾನವಾಗಿತ್ತು. ಅದು ಆ ಮೇಲೆ ಮಹಾರಾಷ್ಟ್ರಕ್ಕೆ ಏಕೆ ಸೇರಬಾರದು ? ಭಾಷಾವಾರು ಪ್ರಾಂತಗಳಾದಾಗ ಮಹಾರಾಷ್ಟ್ರ ಹಾಗೂ ಗುಜರಾಥ್ ರಾಜ್ಯಗಳೂ ಆದವು. ಅದರಂತೆ ನಮ್ಮ ಕರ್ಣಾಟಕ ಪ್ರಾಂತವೂ ಆಗಿದೆ. ಇದನ್ನು ಇನ್ನೂ ಪ್ರಗತಿಯಿಂದ ಕಟ್ಟೋಣ. ನಾನು ನಮ್ಮ ಮಹಾರಾಷ್ಟ್ರದ ಜನಗಳಲ್ಲಿ ವಿನಂತಿ ಮಾಡುವುದು ಬೆಳಗಾಂ ಕರ್ಣಾಟಕದಲ್ಲಿದ್ದರೆ ಇದರಿಂದ ಯಾರಿಗೂ ತೊಂದರೆ ಇಲ್ಲ. ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ಹೇಳುವುದು ಸರಿಯಲ್ಲ. ಬೆಳಗಾಂ, ನಿಪ್ಪಾಣಿ ಹಾಗೂ ಕಾರವಾರ ಇವೆಲ್ಲ ಕರ್ಣಾಟಕದ ಭಾಗಗಳು. ಮಹಾರಾಷ್ಟ್ರದ ಮಂದಿ ಕೆಲವು ಕಡೆ ಇದ್ದರೂ ಅವರಿಗೇನೂ ತೊಂದರೆ ಇಲ್ಲ. ಅದೂ ಅಲ್ಲದೆ ಹಿಂದೆ ಪೆನ್‌ಷನ್ ತೆಗೆದುಕೊಂಡ ಎಷ್ಟೋ ಮಂದಿ ಇಲ್ಲಿ ಬಂದು ಬಿಲ್ಡಿಂಗುಗಳನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದಾರೆ. ಇದರಿಂದ ಮಹಾರಾಷ್ಟ್ರದ ಮಂದಿ ಹೆಚ್ಚಾಗಿದ್ದರೂ ಅವರೆಲ್ಲ ಇಲ್ಲೇ ಇರಬೇಕೆಂದು ಇದ್ದಾರೆ. ನಿಪ್ಪಾಣಿ ತಂಬಾಕಿನ ಒಂದು ದೊಡ್ಡ ವ್ಯಾಪಾರ ಸ್ಥಳ.

(Interruption).

ಬೊಂಬಾಯಿ ಕರ್ಣಾಟಕ ಎಂದು ಹಿಂದೆ ಕೂಡ ಇತ್ತು. ಇಲ್ಲಿ ಕನ್ನಡ ಶಾಲೆಗಳೂ ಇವೆ, ಮರಾಠಿ ಶಾಲೆಗಳೂ ಇವೆ, ಬೊಂಬಾಯಿಗೆ ಈಗ ಗುಜರಾತಿನವರು ಬರೋದಿಲ್ಲ. ನಿಪ್ಪಾಣಿ ಎಂದಿಗೂ ಮಹಾರಾಷ್ಟ್ರಕ್ಕೆ ಹೋಗುವುದಿಲ್ಲ. ನಿಪ್ಪಾಣಿಯಲ್ಲಿ ನಮ್ಮ ಕನ್ನಡ ಮಂದಿಯೇ ಹೆಚ್ಚು ವ್ಯಾಪಾರ ಮಾಡುತ್ತಿದ್ದಾರೆ. ವಾಸ್ತವವಾಗಿ ಬೆಳಗಾಂ, ನಿಪ್ಪಾಣಿ ಹಾಗೂ ಕಾರವಾರ ಇವು ಕರ್ಣಾಟಕದ ಭಾಗಗಳು. ಹೀಗಿರುವಾಗ ಮಹಾರಾಷ್ಟ್ರದವರೊಡನೆ ಜಗಳ ಮಾಡಲು ಹೋಗಬಾರದು. ಅಕ್ಕಲಕೋಟೆ ನೋಡಿ. ಅಲ್ಲಿ ಅರ್ಧ ಭಾಗ ಜನರು ಕನ್ನಡ ಮಾತಾಡುವವರೇ ಇದ್ದಾರೆ. ಷೋಲಾಪುರದಲ್ಲಿ ಕೂಡ ಅರ್ಧ ಭಾಗ ಜನ ಕನ್ನಡ ಮಾತಾಡುವವರೇ ಇದ್ದಾರೆ. ಹಾಗೂ ಚಿಕೋಡಿಯಲ್ಲಿ ಕನ್ನಡ ಮಾತಾಡುವ ಊರುಗಳೇ ಇವೆ. ಅಲ್ಲದೆ ನನ್ನ ಮನೆಯಲ್ಲೇ ನಾಲ್ಕು ಜನ ಸೊಸೆ ಇದ್ದಾರೆ. ಒಬ್ಬರು ಇಂಗ್ಲಂಡದವರು ಇನ್ನೊಬ್ಬರು ಪಾರ್ಸಿ ಮನೆತನದವರು ಇನ್ನೊಬ್ಬರು ಕರ್ನಾಟಕದವರು ಮತ್ತೊಬ್ಬರು ಮಹಾರಾಷ್ಟ್ರದವರು. ಹೀಗೆ ಒಂದೊಂದು ಭಾಗದಿಂದ ಬಂದಿದ್ದರೂ ಕೂಡ ಎಲ್ಲ ಚೆನ್ನಾಗಿಯೇ ಇದ್ದಾರೆ. ಆದುದರಿಂದ ಮಹಾರಾಷ್ಟ್ರ ಹಾಗೂ ಕರ್ಣಾಟಕದರು ಎಂದು ಒಬ್ಬರಿಗೊಬ್ಬರು ಜಗಳ ಮಾಡಲಿಕ್ಕೆ ಹೋಗಬಾರದು. ಇದಕ್ಕಾಗಿ ಒಂದು ಕಮಿಷನ್ನು ಮಾಡುವುದು ಬೇಡ. ಯಾವ ಕಮಿಷನ್ನೂ ಮಾಡುವುದು ಬೇಡ ಎಂದು ನಾನಿಲ್ಲಿ ವಿನಂತಿ ಮಾಡುತ್ತೇನೆ. ನಿಪ್ಪಾಣಿಯಲ್ಲಿ ನಮ್ಮ ಜನಕ್ಕೆ ಒಂದು ರೂಪಾಯಿಗೆ ಒಂದು ಕಿಲೋ ಗೋಧಿ ಒಂದೂವರೆ ರೂಪಾಯಿಗೆ ಒಂದು ಕಿಲೋ ಅಕ್ಕಿ, ದೀಡು ರೂಪಾಯಿಗೆ ಒಂದು ಕಿಲೋ ಜೋಳ ಹೀಗೆ ನಮ್ಮ ಜನಕ್ಕೆ ಇಲ್ಲಿ ಸಿಗುತ್ತದೆ. ಅಕ್ಕಿ ಸಿಗದೇ ಇದ್ದಾಗ ಗೋಧಿ ಉಪಯೋಗಿಸಿ ಬರೀ ಚಪಾತಿಯನ್ನು ತಿನ್ನುತ್ತಾರೆ. ಮಹಾರಾಷ್ಟ್ರದಲ್ಲಿ ಅನ್ನ ತಿನ್ನುವುದಕ್ಕೇ ಜನಕ್ಕೆ ಸರಿಯಾಗಿ ಸಿಗುತ್ತಿಲ್ಲ. ಇದರ ಕಡೆಗೆ ಹೆಚ್ಚು ಗಮನ ಕೊಡಬೇಕು. ಮರಾಠಿ ಜನರು ಹಾಗೂ ಕನ್ನಡ ಜನರು ಜಗಳ ಮಾಡಲು ಹೋಗಬೇಡಿ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮೂರು ದಿನಗಳಿಂದ ನಡೆಯುತ್ತಿರುವ ಚರ್ಚೆಯಲ್ಲಿ ಭಾಗವಹಿಸಲು ನನಗೆ ಅವಕಾಶ ಮಾಡಿ ಕೊಟ್ಟುದಕ್ಕಾಗಿ ಮೊಟ್ಟಮೊದಲನೆಯದಾಗಿ ನಾನು ಅಧ್ಯಕ್ಷರನ್ನು ವಂದಿಸುತ್ತೇನೆ.

ನಾನು ಹೇಳತಕ್ಕ ಎರಡು ಮೂರು ವಿಷಯುಗಳನ್ನು ಈಗಾಗಲೇ ನಮ್ಮ ಸ್ನೇಹಿತರು ಹೇಳಿ ರುವುದರಿಂದ ಅವುಗಳನ್ನು ಬಿಟ್ಟು ಬೇರೆ ಕೆಲವು ವಿಚಾರಗಳನ್ನು ಇಲ್ಲಿ ಹೇಳಲು ಪ್ರಯತ್ನ ಪಡುತ್ತೇನೆ. ಸುಮಾರು ಹತ್ತು ವರ್ಷಗಳ ಹಿಂದೆ ಹಿಂದೂಸ್ಥಾನದಲ್ಲಿ ಎಲ್ಲ ಪ್ರಾಂತಗಳನ್ನೂ ಭಾಷೆಯ ಆಧಾರದ ಮೇಲೆ ಮಾಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡರು. ಅದಕ್ಕಾಗಿ ಎಲ್ಲ ಪ್ರಾಂತಗಳಲ್ಲೂ ಸಂಚಾರ ಮಾಡಿ ಅಂಕೆ ಅಂಶಗಳನ್ನು ಕ್ರೋಢೀಕರಿಸಿ ಸರಿಯಾದ ನಿರ್ಧಾರ ಮಾಡಬೇಕೆಂದು ಫಜಲಾಲಿ ಕಮಿಷನನ್ನು ಮಾಡಿದರು. ಅವರು ಒಂದು ರಿಪೋರ್ಟನ್ನು ಕೇಂದ್ರ ಸರ್ಕಾರದಲ್ಲಿಟ್ಟ ಮೇಲೆ ಅದರ ಆಧಾರದ ಮೇಲೆ ಸಂಸ್ಥಾನಗಳ ಪುನರ್ವಿಂಗಡಣೆ ಮಾಡಬೇಕೆಂದು ಆಗಿನ ಗೃಹ ಮಂತ್ರಿ ಗಳು ಇದನ್ನು ಈ ಸಭೆಯ ಮುಂದೆ ತಂದರು. ಅದರಂತೆ ಒಂದು ಕಾನೂನು ಮಾಡಿ ಒಪ್ಪಿಕೊಂಡು ಹತ್ತು ವರ್ಷಗಳಾದ ಮೇಲೆ ಪುನಃ ಈ ಪ್ರಾಂತಗಳ ಪುನರ್ರಚನೆ ಮಾಡತಕ್ಕದ್ದು ಎಷ್ಟುಮಟ್ಟಿಗೆ ಸಾಧು ಎನ್ನುವುದನ್ನು ಆಲೋಚನೆ ಮಾಡಬೇಕಾಗಿದೆ. ಈಗಾಗಲೇ ಇಲ್ಲಿ ಮಾತಾಡಿದಂತಹ ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ಮಾಡಿದ ವಾದವನ್ನು ನಾವು ಕೇಳಿದೆವು. ಅವರು ಹೇಳಿದಂತೆ ಪ್ರಾಂತ ಪುನರ್ ವಿಂಗಡಣೆಯನ್ನು ಕಾನೂನು ಪ್ರಕಾರ ಮಾಡಲು ಒಂದು ತೀರ್ಮಾನ ತೆಗೆದುಕೊಂಡಿರುವಾಗ ಅದನ್ನು ತಿರುಗಿ ವಿಮರ್ಶೆ ಮಾಡತಕ್ಕ ಅವಕಾಶ ಇರುತ್ತದೆ ಎಂದು ಹೇಳುವುದು ಸರಿಯಲ್ಲ. ಅವರು ಹೇಳುವ ವಾದ ಪ್ರಾಂತಗಳ ಪುನರ್‌ವಿಂಗಡಣೆ ಮಾಡಲು ಎಷ್ಟು ದೂರ ಹೋಗಿ ಹೇಳಿದ್ದಾರೆ ಎನ್ನುವುದು ಬಹು ಮುಖ್ಯವಾದುದು. ಹಿಂದೆ ಕಾನೂನು ಮಾಡುವಾಗ ಅನೇಕ ಅಭಿಪ್ರಾಯಗಳು ಬಂದಿದ್ದವು ಎಂದು ಆಗಿನ ಗೃಹ ಮಂತ್ರಿಗಳಾಗಿದ್ದ ಶ್ರೀ ಪಂತ್‌ರವರು ಹೇಳಿದ್ದಾರೆ. ನೂರಕ್ಕೆ ನೂರರಷ್ಟು ಭಾಷೆಯ ಆಧಾರದ ಮೇಲೆಯೇ ಪ್ರಾಂತಗಳನ್ನು ಮಾಡುವುದು ಸಾಧ್ಯವಿಲ್ಲ ಎಂದು ಆಗಲೇ ಅವರು ಹೇಳಿದ್ದರು.

ಮಾನ್ಯ ಸದಸ್ಯರಾದ ಶ್ರೀ ಸುಂತಂಕುರ್‌ರವರೂ ಕೂಡ ಇದನ್ನೆ ಹೇಳಿದ್ದಾರೆ. ಪ್ರಾಂತಗಳ ಪುನರ್ ರಚನೆ ಮಾಡುವಾಗ ಕನ್ನಡ ಪ್ರಾಂತದಲ್ಲಿ ವಾಸ ಮಾಡುವ ಮಹಾರಾಷ್ಟ್ರದ ಜನ ಮಹಾರಾಷ್ಟ್ರಕ್ಕೆ ಹೋಗಬೇಕೆಂದು ಹೇಳುವುದು ಸೂಕ್ತ. ಇಂತಹ ವಿಚಾರಗಳನ್ನು ತೀರ್ಮಾನ ಮಾಡಲು ಶಾಸನದಲ್ಲಿ ಜೋನಲ್ ಕೌನ್ಸಿಲ್ ಮಾಡಿ ಇದನ್ನು ಪರಿಶೀಲನೆ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಈ ಜೋನಲ್ ಕೌನ್ಸಿಲ್ ಯಾವ ಯಾವ ವಿಚಾರಗಳನ್ನು ತೆಗೆದುಕೊಂಡು ತೀರ್ಮಾನ ಮಾಡಬೇಕು ಎನ್ನುವುದು ಕಾನೂನಿನಲ್ಲಿ ಹೇಳಿದ್ದಾರೆ. ಸ್ಟೇಟ್ಸ್ ರೀಆರ್ಗನೈಸೇಷನ್ ರಿಪೋರ್ಟಿನಲ್ಲಿ ಒಂದು ಕಡೆ ಏನು ಹೇಳಿದ್ದಾರೆ ಎಂದರೆ, ಪ್ರಾಂತಗಳ ಪುನರ್ವಿಂಗಡಣೆ ಮಾಡುವಾಗ ಜಿಲ್ಲೆಯನ್ನು ಒಂದು ಘಟಕವಾಗಿ ತೆಗೆದುಕೊಂಡು ಪ್ರಾಂತಗಳ ಪುನರ್‌ವಿಂಗಡಣೆ ಮಾಡಬೇಕು ಎಂದು. ಅನೇಕ ಸಂದರ್ಭಗಳಲ್ಲಿ ಒಂದೇ ಭಾಷೆ ಮಾತಾಡುವ ಜನ ಶೇಕಡಾ 70 ರಷ್ಟು ಇಲ್ಲದೇ ಇರುವಾಗ ತಾಲ್ಲೂಕನ್ನು ಘಟಕವಾಗಿ ತೆಗೆದುಕೊಳ್ಳಲು ಬರುವುದಿಲ್ಲ. ಉದಾಹರಣೆಯಾಗಿ ಮದ್ರಾಸು ಕರ್ಣಾಟಕದ ಕೆಲವು ಭಾಗಗಳು ನಮ್ಮ ಪ್ರಾಂತದೊಡನೆ ವಿಲೀನವಾದ ನಿದರ್ಶಗಳನ್ನು ತೆಗೆದುಕೊಳ್ಳಬಹುದು. ಕೊಳ್ಳೇಗಾಲದ ತಾಲ್ಲೂಕು ನಮ್ಮ ರಾಜ್ಯಕ್ಕೆ ಬರುವ ಮುನ್ನ ಅದು ಕೊಯಮತ್ತೂರು ಜಿಲ್ಲೆಗೆ ಸೇರಿತ್ತು. ಇಲ್ಲ ಶೇಕಡಾ 70 ಕ್ಕಿಂತ ಹೆಚ್ಚು ಜನ ಕನ್ನಡ ಮಾತಾಡುವ ಜನ ಇದ್ದುದರಿಂದ ಇಲ್ಲಿ ಜಿಲ್ಲಾ ಘಟಕ ಬಿಟ್ಟು ತಾಲ್ಲೂಕು ಘಟಕವನ್ನು ತೆಗೆದುಕೊಳ್ಳಬೇಕಾಗಿ ಬಂತು. ಅದಕ್ಕೆ ಒಂದು ನಿದರ್ಶನವನ್ನು ಕೊಡುತ್ತೇನೆ. ತಾಳವಾಡಿ ಫಿರ್ಕಾ ಸುಮಾರು 35 ಸಾವಿರ ಜನಸಂಖ್ಯೆಯುಳ್ಳ 30 ಹಳ್ಳಿಗಳಿಂದ ಕೂಡಿರತಕ್ಕ ಫಿರ್ಕಾ. ಅಲ್ಲಿ ಸೇಕಡ 98 ರಷ್ಟು ಕನ್ನಡ ಮಾತನಾಡತಕ್ಕ ಜನರಿದ್ದಾರೆ. ಅಂದಮೇಲೆ ಅದು ಕನ್ನಡನಾಡಿನ ಜೊತೆಯಲ್ಲಿ ಸೇರುವುದಕ್ಕೆ ಏತಕ್ಕಾಗಲಿಲ್ಲವೆಂಬುದನ್ನು ವಿಚಾರ ಮಾಡಬೇಕಾಗಿದೆ. ತಾಲ್ಲೂಕು ಮಟ್ಟಕ್ಕಿಂತ ಕೆಳಮಟ್ಟದ ಭಾಗಗಳನ್ನು ಇಲ್ಲಿ ಚರ್ಚೆ ಮಾಡುವುದು ಸರಿಯಲ್ಲ. ಅವನ್ನು ಹೊಂದಾಣಿಕೆ ಮಾಡುವುದಕ್ಕೂ ಸಾಧ್ಯವಿಲ್ಲ.

5-00 P.M.

ಹಿಂದೆ ಈ ರೀತಿಯಾದಂಥ ಸಮಸ್ಯೆಗಳು ಬಂದಾಗ ಜೋನಲ್ ಕೌನ್ಸಿಲ್‌ಗಳು ಎರಡು ವರ್ಷಗಳ ಕಾಲ ಕೂತು ಪುನರ್ವಿಮರ್ಶೆ ಮಾಡಿ ಯಾವ್ಯಾವ ಜನ ಯಾವ್ಯಾವ ಪ್ರಾಂತಕ್ಕೆ ಸೇರಬೇಕೆಂಬ ಬಗ್ಗೆ ಎಲ್ಲರ ಅಭಿಪ್ರಾಯಗಳನ್ನೂ ತೆಗೆದುಕೊಂಡು, ಅಂಕಿ ಅಂಶಗಳನ್ನೂ ಸಹ ತೆಗೆದುಕೊಂಡು ತೀರ್ಮಾನ ಮಾಡುವುದು ಯೋಗ್ಯವೆಂದು ಮಾಡಿದರು. ಆದರೂ ಇದುವರೆಗೂ ತಾಳವಾಡಿ ಫಿರ್ಕಾ ಕನ್ನಡ

(ಶ್ರೀ ಎಂ. ಸಿ. ಬಸಪ್ಪ)

ನಾಡಿಗೆ ಬಂದು ಸೇರಿಲ್ಲ. ಅವರ ಸಂಸ್ಕೃತಿ, ವ್ಯಾಪಾರ, ನಡೆ ನುಡಿಗಳನ್ನು ನೋಡಿದರೆ ಕನ್ನಡ ನಾಡಿಗೆ ಸೇರತಕ್ಕ ಜನ ನೂರಕ್ಕೆ ನೂರರಷ್ಟು ಇದ್ದಾರೆಂದು ಹೇಳಬಹುದು. ತಾಳವಾಡಿ ಫಿರ್ಕಾ ಜನರೆಲ್ಲರೂ ಇಲ್ಲಿಗೆ ಬಂದು ಸೇರಿದರೆ ಕೇವಲ ಕೆಲವು ಜನ ಕೊಯಮತ್ತೂರಿನಲ್ಲಿಯೇ ಉಳಿಯಬಹುದೆಂದು ನಾನು ಹೇಳಬಹುದು. ಆದ್ದರಿಂದ ಜೋನಲ್ ಕೌನ್ಸಿಲ್ ಅವರ ಕಾರ್ಯವೇನೆಂದರೆ, ಈ ರೀತಿಯಾಗಿ ಅನಿವಾರ್ಯವಾಗಿ ಬಿಟ್ಟಿರತಕ್ಕ ಜನಗಳನ್ನು ಕೂಡಿಸುವುದಾಗಿದೆ. ಅದಕ್ಕೊಂದು ಅವಕಾಶ ಈಗ ಬಂದಿದೆ. ಅದು ಯೋಗ್ಯವಾದುದೆಂದು ನಾನು ಹೇಳಬೇಕಾಗಿದೆ. ಅದೂ ಕೂಡ ಒಬ್ಬರಿಗೊಬ್ಬರು ಪರಸ್ಪರ ಒಪ್ಪಿ ತೀರ್ಮಾನ ಮಾಡುವಂಥಾದ್ದಾಗಿದೆ. ಕೇಂದ್ರ ಸರ್ಕಾರದವರಾಗಲೀ ಅಥವಾ ಮೈಸೂರು ರಾಜ್ಯ ಸರ್ಕಾರದವರಾಗಲೀ ಅಜಿಟೇಷನ್ ಇಲ್ಲದೆ ಯಾವ ಕೆಲಸ ಮಾಡುತ್ತಾರೆ? ಕೇಂದ್ರ ಸರ್ಕಾರವೇ ಆಗಲೀ ಅಥವಾ ರಾಜ್ಯ ಸರ್ಕಾರವೇ ಆಗಲೀ ಯಾವುದಾದರೂ ಒಂದು ಬೇಡಿಕೆಯನ್ನು ವಿಮರ್ಶೆ ಮಾಡಬೇಕಾಗಿದ್ದರೆ ಎಲ್ಲಿ ಅಜಿಟೇಷನ್ ಇದೆಯೋ ಅಲ್ಲಿ ಅದನ್ನು ವಿಚಾರಮಾಡುವುದು ಅಜಿಟೇಷನ್ ಇಲ್ಲದಿದ್ದರೆ ಏತಕ್ಕೆ ಆ ಪ್ರಶ್ನೆಯನ್ನು ವಿಮರ್ಶೆ ಮಾಡಬೇಕೆಂಬ ದೃಷ್ಟಿ ಖಂಡಿತವಾಗಿ ನ್ಯಾಯವಾದುದಲ್ಲ. ಚಳುವಳಿ ಇರಲಿ, ಇಲ್ಲದೇ ಇರಲಿ ನ್ಯಾಯವಾಗಿ ಕನ್ನಡನಾಡಿಗೆ ಸೇರತಕ್ಕ ಕನ್ನಡ ಭಾಗಗಳು ಇದ್ದರೆ ಅವು ಕನ್ನಡನಾಡಿಗೇ ಸೇರಬೇಕು. ಈ ವಿಚಾರದಲ್ಲಿ ಮಹಾರಾಷ್ಟ್ರದವರು ಬೇಕಾದಷ್ಟು ಹೇಳಿದ್ದಾರೆ. ಬಹುಶಃ ಅವರು ಚಳುವಳಿ ಮಾತನ್ನು ಒಂದನ್ನೇ ಹೇಳದೆ ಕರ್ಣಾಟಕದಲ್ಲಿ ನಡೆದ ಚಳುವಳಿ ಉದ್ವೇಗಪೂರಿತವಾದುದು ಎಂಬುದಾಗಿ ಹೇಳಿದರು. ಮಾನ್ಯ ಮುಖ್ಯಮಂತ್ರಿಗಳ ಮುಂದೆ ಮಹಾರಾಷ್ಟ್ರದವರು ಕನ್ನಡನಾಡಿನವರ ಬಗ್ಗೆ ಈ ರೀತಿಯಾಗಿ ಉದ್ರೇಕವನ್ನುಂಟು ಮಾಡುವ ಮಾತನಾಡುವುದರಿಂದ ನಿಜವಾಗಿ ಈ ಸಮಸ್ಯೆಯನ್ನು ಪರಿಹಾರಮಾಡುವುದಕ್ಕಾಗುವುದಿಲ್ಲ ವೆಂಬುದನ್ನು ಮಹಾರಾಷ್ಟ್ರ ಏಕೀಕರಣ ಸಮಿತಿ ಸದಸ್ಯರು ಮನಗಾಣಬೇಕು. ಇವತ್ತು ಅಲ್ಲಿ ಬೆಳಗಾಂ, ಕಾರವಾರ ಮತ್ತು ನಿಪ್ಪಾಣಿ ಪ್ರಾಂತಗಳು ಮಹಾರಾಷ್ಟ್ರಕ್ಕೇ ಸೇರಬೇಕು ಎಂಬುದಾಗಿ ಹೇಳುವ ಜನ ಶೇಕಡ 70 ರಷ್ಟಿದ್ದಾರೆಂದು ಭಾವಿಸಿದರೂ ಅದು ಯೂನಿಲಿಂಗ್ವಲ್ ಆಗುತ್ತದೆ ಮತ್ತು ಅವರು ಕೇಳಿದಹಾಗೆಯೇ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದು ತಪ್ಪನ್ನು ಮಾಡಿದ್ದಾರೆ, ಸಣ್ಣ ಪುಟ್ಟ ಗಡಿ ಹೊಂದಾಣಿಕೆಗೆ ಸದಾ ನಾವು ಸಿದ್ಧರಿದ್ದೇವೆಂದು ಒಪ್ಪಿಕೊಂಡು ಬಂದಿದ್ದಾರೆಂದು ಕೆಲವರು ಹೇಳಿದರು. ನಾನು ಹೇಳುವುದೇನೆಂದರೆ, ಅವರು ಹೇಳಿದ್ದರಲ್ಲಿ ಏನೂ ತಪ್ಪು ಕಾಣುತ್ತಾ ಇಲ್ಲ. ತಾಲ್ಲೂಕು ಮಟ್ಟದಲ್ಲಿ ಫಿರ್ಕಾಗಳಿದ್ದರೂ ಎಸ್. ಆರ್. ಸಿ. ಆಕ್ಟ್‌ನಲ್ಲಿ ಅವನ್ನು ಸರಿಹೊಂದಿಸಲಿಕ್ಕಾಗಲಿಲ್ಲ........

ಶ್ರೀ ಜಿ. ವಿ. ಗೌಡ (ಪಾಳ್ಯ).—ಏಕೆ ಆಗಲಿಲ್ಲ ?

ಶ್ರೀ ಎಂ. ಸಿ. ಬಸಪ್ಪ.—ಅದು ಪಾರ್ಲಿಮೆಂಟ್ ತೀರ್ಮಾನ. ಅದರ ಬಗ್ಗೆ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಜಿ. ವಿ. ಗೌಡ.—ಎಲ್ಲಿ ಯೂನಿಲಿಂಗ್ವಲ್ ಇದೆಯೋ ಅಲ್ಲಿ ತೀರ್ಮಾನ ಮಾಡಿದಮೇಲೆ ಪಾರ್ಲಿಮೆಂಟಿನಲ್ಲಿ ಆ ಬಗ್ಗೆ ತೀರ್ಮಾನ ಇನ್ನೂ ಏಕೆ ಆಗಲಿಲ್ಲ ?

ಶ್ರೀ ಎಂ. ಸಿ. ಬಸಪ್ಪ.—ಇವತ್ತು ಮಾನ್ಯ ಮುಖ್ಯಮಂತ್ರಿಗಳು ಸಣ್ಣಪುಟ್ಟ ಹೊಂದಾಣಿಕೆ ಒಪ್ಪುತವೆಂದು ಹೇಳಿದರು. ಅಂಥಾದ್ದಕ್ಕೆ ಅಪಾರ್ಥವನ್ನು ಮಾನ್ಯ ಸದಸ್ಯರು ಕೊಡುವುದು ಸರಿಯಲ್ಲ. ಅಂಥಾದ್ದರಲ್ಲಿ ಮಹಾರಾಷ್ಟ್ರದವರು ಅವರಿಗೆ ಬೆಳಗಾಂ ಬರಬೇಕು, ಕಾರವಾರ ಬರಬೇಕು ಎಂದು ಹೇಳುವುದು ಖಂಡಿತವಾಗಿ ಸರಿಯಲ್ಲ.

ಶ್ರೀ ಜಿ. ವಿ. ಗೌಡ.—ಹಾಗಾದರೆ ಏಕಸದಸ್ಯ ಆಯೋಗ ರಚನೆಯ ಅಗತ್ಯವೇನು ?

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಜೋನಲ್ ಕೌನ್ಸಿಲ್ ಮುಂದೆ ಹಿಂದೆ ಆ ರೀತಿಯಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆಯೇ ?

ಶ್ರೀ ಎಂ. ಸಿ. ಬಸಪ್ಪ.—ಶ್ರೀಮಾನ್ ವೆಂಕಟೇಗೌಡರಿಗೆ ಈ ವಿಚಾರವಾಗಿ ವಿವರವಾಗಿ ಹೇಳಬೇಕಾಗಿದೆ. ಪ್ರಾಂತ ಪುನರ್ವಿಂಗಡಣಾ ಆಕ್ಟಿನಲ್ಲಿ ಜೋನಲ್ ಕೌನ್ಸಿಲ್ಲಿಗೆ ಅವಕಾಶವಿದೆ. ಜೋನಲ್ ಕೌನ್ಸಿಲ್‌ನವರು ಆ ವಿಷಯದಲ್ಲಿ ತೀರ್ಮಾನಕ್ಕೆ ಬಂದರೆ ಏನೂ ತಪ್ಪು ಇಲ್ಲ. ಅವರು ಆ ಆಕ್ಟಿನಲ್ಲಿರುವ ಪರಿಮಿತಿಯಂತೆ ಕೆಲಸಮಾಡಿದರೆ ಅದೇನೂ ಖಂಡಿತವಾಗಿ ತಪ್ಪಾಗುವುದಿಲ್ಲ.

Sri G. V. GOWDA.—You yourself pleaded that this should be referred to Zonal Council. Why should they not do it like that ?

Mr. SPEAKER.—The Hon'ble Member is entitled to be heard in silence. Sri Basappa told that those in the border area may participate in the debate. That is what I have heard him saying.

ಶ್ರೀ ಎಂ. ಸಿ. ಬಸಪ್ಪ.—ಈಗ ಏಕಸದಸ್ಯ ಆಯೋಗವನ್ನು ನೇಮಿಸಿದ್ದೇ ಆದರೆ, ಸೋಲಾಪುರ, ತಾಳವಾಡಿ ಫಿರ್ಕಾ, ಮಡಕಸಿರಾ, ಕೇರಳದಲ್ಲಿರತಕ್ಕ ಕಾಸರಗೋಡು—ಇವೆಲ್ಲಾ ನಮಗೆ ಬರುತ್ತದೆಂದು ತೋರಿಸಿದರೆ, ಅವ್ಯಾವುದನ್ನೂ ಕೂಡ ಕರ್ಣಾಟಕಕ್ಕೆ ತರಿಸುವುದಕ್ಕಾಗುವುದಿಲ್ಲ ಅವರು ಆ ರೀತಿ ಇಷ್ಟಪಡುವುದಿಲ್ಲ. ಮಹಾರಾಷ್ಟ್ರಕ್ಕೆ ಕೊಡುವುದಕ್ಕೆ ಮಾತ್ರ ಅವರು ಏನು ಕಮಿಟಿ ಮಾಡಿದ್ದಾರೋ ಅದನ್ನೇ ಸರಿಮಾಡುವುದಕ್ಕೆ ಪ್ರಯತ್ನಪಡುತ್ತೇವೆಂದು ಹೇಳಿದರು. ಈ ವಿಚಾರದಲ್ಲಿ ಮೈಸೂರಿನ ನಿಲುವು ಏನು ಎಂಬುದನ್ನು ಮೈಸೂರು ಸರ್ಕಾರದವರು ಹೊರಡಿಸಿರುವ ಪುಸ್ತಕವನ್ನು ಚೆನ್ನಾಗಿ ಓದಿ ನೋಡಿದ್ದರೆ ಇಂತಹ ಪ್ರಶ್ನೆಯ ಬಗ್ಗೆ ಇಷ್ಟೊಂದು ವಿವಾದವೇ ಬರುತ್ತಿರಲಿಲ್ಲ. ಆದರೆ ಗಡಿ ಪ್ರಶ್ನೆಯ ಬಗ್ಗೆ ಏಕಸದಸ್ಯ ಆಯೋಗ ರಚನೆಯಾದಮೇಲೆ ನಮಗೆ ಬರತಕ್ಕ ತಾಳವಾಡಿ ಫಿರ್ಕಾ, ಮಡಕಸಿರ, ಮತ್ತು ಕಾಸರಗೋಡು ಪ್ರಾಂತಗಳು ನಮಗೆ ಸೇರಬೇಕಾಗುತ್ತದೆ.

Sri C. J. MUCKANNAPPA.—When Mr. Sanjeeva Reddy was the Chief Minister, he told that "if you are going to touch upon the border issues, you are going to lose Bellary." He must bear this in mind.

ಶ್ರೀ ಎಂ. ಸಿ. ಬಸಪ್ಪ.—ನಾನು ಮಾನ್ಯ ಶ್ರೀ ಸಂಜೀವರೆಡ್ಡಿಯವರು ಹೇಳಿದ ವಿಷಯವನ್ನು ಹೇಳುತ್ತಿಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದ್ದಾರೋ ಅವರ ಆ ನಿಲುವನ್ನು ನಾನು ಸಮರ್ಥನೆ ಮಾಡುತ್ತೇನೆ.

Mr. SPEAKER.—The Hon'ble member will kindly remember what I have said yesterday. If he wants to participate in the debate, the time is up. I cannot create time. Yet let him take some time and finish as early as possible.

ಶ್ರೀ ಜಿ. ವಿ. ಗೌಡ.—ಆ ನಿಲುವನ್ನು ಕಾರ್ಯಕಾರಿಸಮಿತಿ ಮುಂದೆ ವಿಚಾರಮಾಡಿ ಒಪ್ಪಿಸಿದ್ದರೆ......

ಶ್ರೀ ಎಂ. ಸಿ. ಬಸಪ್ಪ.—ಈ ಸಭೆಯ ಹೆಚ್ಚು ಕಾಲವನ್ನು ನಾನು ತೆಗೆದುಕೊಳ್ಳುವುದಿಲ್ಲ. ಮೈಸೂರು ಸರ್ಕಾರ ಹಾಗೂ ಮಾನ್ಯ ಮುಖ್ಯಮಂತ್ರಿಗಳ ನಿಲುವಿನ ಬಗ್ಗೆ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ರೀತಿ ಆಗಬಾರದು. ಈ ಸರ್ಕಾರ ಹೊರಡಿಸಿರುವ ಪುಸ್ತಕದಲ್ಲಿ ಏನು ಹೇಳಿದ್ದಾರೋ ಅದು ಖಚಿತವಾಗಿ ಆಗಬೇಕು. ಕರ್ಣಾಟಕಕ್ಕೆ ನ್ಯಾಯವಾಗಿ ಬರತಕ್ಕ ಪ್ರದೇಶಗಳು ಬಂದೇ ಬರಬೇಕು. ಏಕಸದಸ್ಯ ಆಯೋಗ ರಚನೆ ಇರಬೇಕೆಂದು ಒಂದುವೇಳೆ ತೀರ್ಮಾನವಾದರೂ ನ್ಯಾಯವಾಗಿ ಮೈಸೂರಿಗೆ ಬರಬೇಕಾದಂಥ ಕನ್ನಡ ಭಾಗಗಳನ್ನು ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಪ್ರಯತ್ನಪಡುವುದರಲ್ಲಿ ಅವರ ಜೊತೆಗೂಡಿ ಈ ಸಭೆಯ ಎಲ್ಲ ಸದಸ್ಯರೂ ಕೆಲಸಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri BAPU RAO ANANDA RAO HULSURKER (Hulsur).—Mr. Speaker Sir, I would take this opportunity and bring a few facts before this House regarding the Bidar border issue. Sir, my colleagues have dealt with other aspects of the points raised by members on the other side. There are about 200 villages which are purely Marathi speaking and they are contiguous to the adjoining Maharastra State. I would like to bring before the House the percentage of people that are living in the areas we are claiming from Humnabad and Bhalki as well as from a few Taluka places. The percentage of villages of Humnabad which are claiming there are 63 villages speaking Marathi with 63 Languages. Percentage of the Kannada speaking population will be only 16 per cent. In Bhalkhi

(SRI BAPURAO ANANDARAO HULSURKER)

there are 59 villages speaking Marathi the per centage is 59, whereas the Kannada speaking people are only 30 per cent. We are claming the areas of Santpur where there are 70 villages with 60 per cent people speaking Marathi and only 26 per cent are Kannadigas in Santpur taluka. These villages are Marathi speaking and are concentrated on the western part of Maharastra State and they are contiguous and they are not encircled by Kannada speaking villages. This issue should be solved on a definite principle. It has been alleged by the Mysore Government that there had been an agreement in the former Hyderabad State that border issue is already settled and need not be re-opened. This is not the fact and the information supplied by the Government of Mysore is not correct. I want to say what is the real fact. I will place my views and I will give the facts and figures. Sir, there was an agreement only regarding the retention of Bidar as a separate unit and it has to be only with the Bidar Taluk of Bidar District and it should not be joined with the adjoining Gulburga District.

Sir, therefore, there was agitation started representing that Bidar and other taluks should not be joined with Gulburga District and they should be kept separate and the Bidar District and its headquartes should not be changed. This is an agreement and this is only an agreement that was effected. If they agreed to keep Bidar as a separate unit, that does not mean that the Marathi speaking population of Bidar District should be included permanently in the Mysore State. Nowhere it has been stated. I will challenge that Marathawada Leaders ever agreed to it. They have not committed to it. This is a fact. You can verify it from the proceedings of the Hyderabad State Assembly. It is on record. At the same time, Many Marathi speaking Members in Hyderabad Assembly have moved amendments that Marathi speaking villages and circles should be joined with the adjoining Maharashtra State. Finally these amendments were withdrawn. The reason is that the then Chief Minister, Shri B. Ramakrishna Rao assured the Members that these problems for which there is no unanimity will be settled by the Boundary Commission. This is a fact. There was an amendment that the Boundary Commission would be appointed and such problems for which there is no unanimity would be dealt with by the Boundary Commission, and that amendmet was accepted by that House.

SRI S. BHIMANNA.—Where is it found ?

SRI BAPU RAO ANANDA RAO HULSURKER.—It is found in the Assembly proceedings. That can be verified. There an amendment for the appointment of Boundary Commission which was dealt with like this. The Hon'ble Chief Minister assured that these things would be settled by the Boundary Commission. This is what Shri B. Ramakrishna Rao *said*: "The question of boundary adjustment may be considered from two points of view; most of the Hon'ble Members of this House were of

opinion that division should take place villagewise and on linguistic basis. It did not accept language alone as basis ; representations were made to the Government of India ; they felt that districtwise division would be too wide ; on the other hand they felt that villagewise division would create many practical difficulties ; so, they devised a *via media*, talukwise basis and took the decision ; further, most of the Hon'ble Members of this House on both sides agreed that as far as we can arrive at unanimous decision with regard to internal adjustment of the boundary, we many adopt them at this stage and for the disputed area, we may take some time and entrust the matter to a boundary commission. (Pages 34 and 35 of the official Report of the Hyderabad Assembly Thursday, 12th April 1956). These amendments pertain to transfer of some area of Marathawada to Karnataka and *vice versa*. Such matter should be left to Boundary Commission. Most of the Members were of the opinion that all the four Taluks of Bidar, Balki, Humnabad and Santhapur should not be included in Karnatak. I have also received some resolution in this respect, but I do not like to go into details. Such miscellaneous matters should not be called into question at this stage " This is a fact. Now the stage has arrived after so many years of struggle. This is the right time. At least now, it should be solved. I will quote now the speech delivered by the Hon'ble Sri Veerendra Patil in the former Hyderabad Assembly. I will read the relevant sentence from the proceedings of 9th April 1956 which goes to support that. " There was no agreement in regard to the inclusion of Bhalki and Santhapur Taluks in Mysore State. As regards the formation of new borders, some Members desired that village should be accepted as a unit and borders drawn out before 1st October itself. I am of opinion that this issue could easily be solved by the States mutually after 1st October. Bhalki and Santhapur should go to Marathawada. " This is the proceedings of former Hyderabad State, dated 9th April 1956.

Sri VEERENDRA PATIL.—He is quoting some speech that I have made on the floor of the Hyderabad Assembly. I want to know whether I have said Bhalki and Santhapur should go to Maharashtra.

Sri BAPU RAO ANANDA RAO HULSURKER.—This is a speech which is there.

Mr. SPEAKER.—I may mention to the House something more. When South Kanara District was part of Madras, the Madras Legislative Assembly passed a resolution saying that Kasargod should come to Mysore.

Sri BAPU RAO ANANDA RAO HULSURKER.—My point is to show that there was no agreement. In explaining this point I have to quote that.

Mr. SPEAKER.—So far as Kasargod is concerned, not only there was agreement, but it was the other way. The Madras Assembly said by majority that Kasargod should go to Mysore.

Sri BAPU RAO ANANDA RAO HULSURKER.—There was an agreement and the Marathi speaking people tried by mutual agreement to solve the problem, by having some Maratti border areas and giving Kannada areas also. That was the view in former Hyderabad Assembly.

And then Sir, Sri Anna Rao was there, Sri Chandrasekhar Patil was there. Unfortunately for us, at that time there was no agreement on this particular issue between Kannada speaking representatives and Marathi speaking representatives and so that question was not solved there. Now there is an excellent opportunity and why this small unit, should remain in kannada area? We know these small administrative units are a source of trouble from the point of administration also. That is the view expressed in the former Hyderabad areas also. Why these areas which are purely marathi speaking and which are continuous to marathi areas, why should they be retained in Mysore State? Their mother tongue is something different from kannada. Why they should not be given the advantage of joining Maharashtra? The official language of that area and the language spoken by the people in that are the same. In a democracy nothing is final. So many friends have stated that everything is settled, and this issue should not be reopened. As Sri V. S. Patil said, our Constitution itself has been amended nineteen times and expected to be amended the twentieth time also, Punjab and Hariayana are bifurcated, the Bi-lingual Bombay State has been befurcated, why this border areas should be kept here for long? So, sir, the wishes of these people and their desire as expressed by constitutional means, through morchas through elections and various other means, they have placed their views and I for one think that this issue should be solved on the definite principles such as village as a unit, contiguity, relative majority and the wishes of the people, should be taken into consideration.

One thing more. Mysore friend Sri Bheemiah has argued that I am not elected by the Samyuktha Maharashtra Samithi. I have been elected by the Samithi and M. E. S.

(*Interruption*).

I again assert that I have been elected by the Samithi. It is my opponent kannada friend who has got votes by corrupt practice and I have challenged that in the court, in Election petition.

Mr. SPEAKER.—The House has nothing to do with the validity of elections.

Sri BAPU RAO ANANDA RAO HULSURKER.—Last time Mr. Bheema Rao was defeated by our Samithi leaders.

Sri S. BHIMANNA.—What about 1962 elections? How many votes you got? Out of 28,000 votes, you got only 14,000 votes.

(*Interruption*).

Mr. SPEAKER.—Order, order, Evidently, both Members do not want the Reporters to take down what they speak!

Sri BAPU RAO ANANDA RAO HULSURKER.—In the last taluk board elections, we have defeated the Congress *plus* the PSP. We have won the election to the Taluk Board and we have captured the Taluk Board. Some Members who were defeated in elections have come there through backdoor method of nomination.

(*Interruption*)

Mr. SPEAKER.—Are we going to be concerned here with the taluk board election ? The best thing is to call upon the next speaker Sri R. S. Patil.

Sri BAPU RAO ANANDA RAO HULSURKER.—I will conclude in a minute or two Sir.

Mr. SPEAKER.—After the House is adjourned, both the Members will meet in the launge and settle the taluk board affair !

Sri BAPU RAO ANANDA RAO HULSURKER.—I once again say that the issue should be settled keeping the village as a unit, relative majority, and the wishes of the people should be taken into consideration and once for all it should be settled. No final verdict has been given. There is no finality in democracy. Wishes of the people should be respected and this issue should be settled once for all.

With this I conclude. Thank you very much.

ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಮಾನ್ಯ ಅಧ್ಯಕ್ಷರೇ, ಎ. ಐ. ಸಿ. ಸಿ. ಅಧಿವೇಶನದಲ್ಲಿ ತೆಗೆದುಕೊಂಡಂಥ ನಿರ್ಣಯದ ಪ್ರಯುಕ್ತ ಏಕಸದಸ್ಯ ಆಯೋಗವನ್ನು ನೇಮಿಸ ಬೇಕೆಂದು ನಮ್ಮ ದೇಶದ ಮಾನ್ಯ ಪ್ರಧಾನಿಗಳಾದ ಶ್ರೀಮತಿ ಇಂದಿರಾಜಿಯವರು ಒಂದು ಹೇಳಿಕೆ ಯನ್ನು ಕೊಟ್ಟ ಮೇಲೆ ನಮ್ಮ ರಾಜ್ಯದಲ್ಲಿ ನಡೆದಂತಹ ಒಂದು ಅಂಧೋಳನವನ್ನು ನೋಡಿದರೆ ನಮ್ಮ ರಾಜ್ಯದ ಜನತೆಯಲ್ಲಿ ಬಹಳ ತೀವ್ರವಾದ ಅಭಿಪ್ರಾಯ ಉಂಟಾಗಿದೆ ಎಂಬುದನ್ನು ತೋರಿಸು ತ್ತದೆ. ಆ ಒಂದು ಅಭಿಪ್ರಾಯವನ್ನು ಜನತೆ ಬಹಳ ಸ್ಫೂರ್ತಿಯಿಂದ ಚಳುವಳಿಯನ್ನು ನಡೆಸಿ ತೋರಿಸಿಕೊಟ್ಟಿದ್ದಾರೆ. ಆ ಚಳುವಳಿಯ ಬಗ್ಗೆ ನಮ್ಮ ಏಕೀಕರಣ ಸಮಿತಿಯ ಸದಸ್ಯರು ಒಂದು ಅಪಾರ್ಥವನ್ನು ಕಲ್ಪಿಸಿ ಮಾತನಾಡಿದ್ದನ್ನು ನೋಡಿದರೆ ನಮಗೆ ಬಹಳ ವ್ಯಥೆಯಾಗುತ್ತದೆ. ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಯ ಬಗ್ಗೆ ಮತ್ತೊಮ್ಮೆ ತೀರ್ಮಾನ ಮಾಡಬೇಕೆಂದು ಅದಕ್ಕೆ ಏಕ ಸದಸ್ಯ ಆಯೋಗವನ್ನು ರಚಿಸಬೇಕೆಂದು ಕೇಂದ್ರ ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಅದರ ಬಗ್ಗೆ ಜನತೆ ಉಗ್ರವಾಗಿ ಪ್ರತಿಭಟಿಸಿ ಚಳುವಳಿಯ ಮುಖಾಂತರ ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ತೋರಿಸಿಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ನಿರ್ಮಾಣವಾಗಿ 10 ವರ್ಷ ಕಳೆದ ಮೇಲೆ ಈವೊತ್ತು ಈ ಒಂದು ಚಳುವಳಿಯನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯ ಸದಸ್ಯರು ತಮ್ಮ ಒಂದು ಸ್ವಾರ್ಥಕ್ಕಾಗಿ ಮಾಡಿದ್ದಾರೆ. "Just to maintain their local leadership" ಈ ಒಂದು ಉದ್ದೇಶದಿಂದ ಜೀವಂತವಾಗಿ ಇಟ್ಟುಕೊಂಡು ಬಂದಂತಹ ಈ ಗಡಿ ಸಮಸ್ಯೆಯನ್ನು 10 ವರ್ಷಗಳು ಕಳೆದ ಮೇಲೆ ಇವೊತ್ತು ಆ ಸಮಸ್ಯೆಯನ್ನು ತೆಗೆದುಕೊಂಡು ಅವರು ಚಳುವಳಿ ಮಾಡುತ್ತಿರುವುದನ್ನು ನೋಡಿದರೆ ಕನ್ನಡಿಗರಿಗೆ ಕಳಂಕವನ್ನು ಹಚ್ಚುವ ಪ್ರಯತ್ನ ವನ್ನು ಮಾಡಿದ್ದಾರೆ ಅನಿಸುತ್ತದೆ. ಇವೊತ್ತು ಬೇಕಾದರೆ ಶ್ರೀ ಚವಾನ್ ಅವರನ್ನೆ ಕೇಳಲಿ, ಬೆಳಗಾವಿನ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಎಂತಹ ಬಹದ್ದೂರ ಕೆಲಸವನ್ನು ಮಾಡಿದ್ದಾರೆ ಎಂಬುದನ್ನು. ಬ್ರಿಟಿಷರ ಕಾಲದಲ್ಲಿ ನಮಗೆ ಸ್ವಾತಂತ್ರ್ಯ ಬಂದಂತಹ ಕಾಲದಲ್ಲಿ ಬೆಳಗಾವಿನ ಕಾಂಗ್ರೆಸ್ಸಿನವರು ಸಹ ನಮ್ಮ ನಾಡಿಗೆ ಬಹದ್ದೂರ್ ಕೆಲಸವನ್ನು ಮಾಡಿದ್ದಾರೆ. ಕನ್ನಡಿಗರು ಬಹಳ ಸ್ಫೂರ್ತಿಯಿಂದ ನಾಡಿಗಾಗಿ ಕೆಲಸವನ್ನು ಮಾಡಿದ್ದಾರೆ. ಅವರು ಯಾವೊತ್ತು ತಪ್ಪು ದಾರಿಯಲ್ಲಿ ಹೋಗಿಲ್ಲ. ಪರಿಸ್ಥಿತಿ ಹೀಗಿರುವಾಗ ಮಹಾರಾಷ್ಟ್ರ ಏಕಿಕರಣ ಸದಸ್ಯರು ಇಂಥಾ ಹಸಿಯ ಸುಳ್ಳನ್ನು ಹೇಳಬಾರದಾಗಿತ್ತು. ಇದು ನಮಗೆ ಬಹಳ ವ್ಯಸನವನ್ನುಂಟು ಮಾಡುತ್ತದೆ. ಮರಾಠಿಗರು ಚಳುವಳಿ ಮಾಡತಕ್ಕಂಥ ವೈಖರಿ ಹೇಗಿದೆ ಎಂಬುದನ್ನು ಹೇಳುವುದಾದರೆ ಅವರು ಸಾವಂತವಾಡಿ

(ಶ್ರೀ ಆರ್. ಎಸ್. ಪಾಟೀಲ್)

ಮತ್ತು ಕೊಲ್ಲಾಪುರಗಳಿಂದ ಜನಗಳನ್ನು ಬಾಡಿಗೆಗೆ ತೆಗೆದುಕೊಂಡು ಬಂದು ಚಳುವಳಿಯನ್ನು ಮಾಡಿದರು. ಈ ವಿಷಯ ಪ್ರತಿಯೊಬ್ಬ ಕನ್ನಡಿಗರಿಗೂ ಗೊತ್ತು. ಇದನ್ನು ಶ್ರೀಮಾನ್ ವಿ. ಎಸ್. ಪಾಟೀಲರು ಅಲ್ಲಗಳೆಯಲಾರರು ಎಂದು ನಾನು ತಿಳಿದುಕೊಂಡಿದ್ದೇನೆ. ಅವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಚಳುವಳಿಯನ್ನು ಮಾಡಿದ್ದಾರೆ. ನಾವುಗಳು ಅಂಥಾ ಚಳುವಳಿ ಯನ್ನು ಮಾಡಿಲ್ಲ. ನಾವು ನಮ್ಮ ಮನೆಯಲ್ಲಿದ್ದುಕೊಂಡು ಅದು ನನ್ನ ಮನೆ ಎಂದು ಕೂಗುವ ಅವಶ್ಯಕತೆ ಇರಲಿಲ್ಲ. ಅದಕ್ಕೋಸ್ಕರ ನಾವು ಯಾವ ಚಳುವಳಿಯನ್ನು ಮಾಡಲಿಲ್ಲ. ಈ ಸಂದರ್ಭದಲ್ಲಿ ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಹುದು. ಅದೇನೆಂದರೆ "ಒಬ್ಬ ಸಜ್ಜನ ದೇವರಂತಹ ಮನುಷ್ಯ ಒಂದು ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದ. ಅವನ ಮನೆಯ ಪಕ್ಕದಲ್ಲಿ ಎಲ್ಲಾ ಗುಂಡಾಗಳು ವಾಸಮಾಡುತ್ತಿದ್ದರು. ಆ ಗುಂಡಾಗಳು ಸಜ್ಜನ ಮನುಷ್ಯನ ಮನೆಗೆ ಕಲ್ಲುಗಳನ್ನು ಹೊಡೆಯುತಿದ್ದರು. ಪಾಪ ಆ ಮನುಷ್ಯ ಈ ಮನೆ ನಮ್ಮ ಮನೆ ತಾನೆ ಎಂದು ಅವನು ಅದನ್ನು ಸಹಿಸಿಕೊಂಡು ಸುಮ್ಮನೆ ಇದ್ದ. ಆಗ ಮತ್ತೊಬ್ಬರು ಬಂದು ಹೇಳಿದರು ಅದು ನಿನ್ನ ಮನೆಯಲ್ಲ. ಅದು ನಿನ್ನ ಮನೆಯಾಗಿದ್ದರೆ ನೀನು ಅದು ನನ್ನ ಮನೆ ಎಂದು ಕೂಗಿಕೊಳ್ಳು ತ್ತಿದ್ದೆ, ಎಂದು ಹೇಳಿದರಂತೆ. ಆ ಅರ್ಥ ಬರುವ ಹಾಗೆ ಕೇಂದ್ರ ಸರ್ಕಾರದವರು ಈ ಮೈಸೂರು ಮತ್ತು ಮಹಾರಾಷ್ಟ್ರ ಗಡಿಯ ಸಂಬಂಧದಲ್ಲಿ ಏಕ ಸದಸ್ಯ ಆಯೋಗವನ್ನು ರಚಿಸುವುದಕ್ಕೆ ಹೊರಟಿ ದ್ದಾರೆ. ಈ ರೀತಿ ಕೇಂದ್ರ ಸರ್ಕಾರದವರು ಮಾಡುವುದಾದರೆ ನಮ್ಮ ದೇಶದಲ್ಲಿ ಜನತೆಗೆ ನ್ಯಾಯ ಹೇಗೆ ದೊರೆಯುತ್ತದೆ ? ಜನತೆ ಯಾವ ರೀತಿಯಿಂದ ಸುಖವಾಗಿ ಇರುವುದಕ್ಕೆ ಸಾಧ್ಯವಾಗುತ್ತದೆ ? ಒಂದು ಕೆ. ಜಿ. ಅಕ್ಕಿಗೆ 1 ರೂಪಾಯಿ 50 ಪೈಸೆ ಇದೆ. ನಮ್ಮ ದೇಶದಲ್ಲಿ ಇಂಥಾ ಕಷ್ಟಕರ ವಾದ ಆಹಾರದ ಪರಿಸ್ಥಿತಿ ಇದ್ದು ಜನತೆ ಜೀವನವನ್ನು ಮಾಡುವುದಕ್ಕೆ ತೊಂದರೆ ಪಡುತ್ತಿರುವ ಸಮಯದಲ್ಲಿ ಕೆಲವರು ಸ್ವಾರ್ಥಕ್ಕಾಗಿ ಗಡಿಪ್ರಶ್ನೆಯನ್ನು ತೆಗೆದುಕೊಂಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ.

5-30 P.M.

ಇವರು ಒಂದು ಸ್ವಾರ್ಥಲಾಲಸೆಂಯನ್ನು ಬಿಟ್ಟು, ದೇಶದ ಸಮಗ್ರ ಚಿತ್ರವನ್ನು ತಮ್ಮ ಮುಂದೆ ಇಟ್ಟುಕೊಂಡು ಇಂಥ ಚಳವಳಿ ಕಾರ್ಯ ಬಿಟ್ಟು, ದೇಶದಮೇಲೆ ಅಭಿಮಾನ ಇಟ್ಟು ಮಾಡಬೇಕು ಎಂದು ಈ ಸಭೆ ಮೂಲಕ ಕೇಳಿಕೊಳ್ಳುತ್ತೇನೆ. ಕರ್ನಾಟಕ ಈ ಕರ್ನಾಟಕ ದೇಶದ ಹಿಂದೆ ಎಷ್ಟು ಉಜ್ವಲ ಇತಿಹಾಸ ಇದೆ ಎಂತಹ ಉಜ್ವಲ ರಾಜ್ಯ ಆಗಿತ್ತು ಎನ್ನುವುದು ಇತಿಹಾಸ ಓದಿದರೆ ಎಲ್ಲರಿಗೂ ಗೊತ್ತಿದೆ, ಇವರ ಇತಿಹಾಸ ಜ್ಞಾನ ನೋಡಿ ನನಗೆ ಖೇದವಾಗಿದೆ. ಕರ್ನಾಟಕದ ಇತ್ತಿಚೆಗೆ ದೇಶದ ರಕ್ಷಣೆ ಯಲ್ಲಿ ಕಡಿಮೆ ಭಾಗ ವಹಿಸಿದೆ ಎಂದು ಶ್ರೀ ಕದಮ್ ಹೇಳಿದರು. ಕರ್ನಾಟಕ ರಾಜ್ಯ ನಮ್ಮ ಸೈನ್ಯಕ್ಕೆ ಇಬ್ಬರು ಮಹಾದಂಡನಾಯಕರನ್ನು ಕೊಟ್ಟಿದೆ ಎನ್ನುವುದನ್ನು ಮರೆಯಬಾರದು. ಆ ಕೆಲಸ ಇವರಿಂದ ಆಗಲಿಲ್ಲ ಎಂದು ಅವರ ಗಮನಕ್ಕೆ ತರಬಯಸುತ್ತೇನೆ. ಹಿಂದೆ ಯುದ್ಧದಲ್ಲಿ ಸುಮಾರು ಒಂದೇ ಜಿಲ್ಲೆಯಲ್ಲಿ 200, 300 ಜನ ಯೋಧರು ಮಡಿದದ್ದು ಗೊತ್ತಿಲ್ಲವೇ ? ಕರ್ನಾಟಕ ವೀರ ಕೊಡಗರ ನಾಡು ಎನ್ನುವುದು ಗೊತ್ತಿಲ್ಲವೇ ಎಂದು ಕೇಳುತ್ತಾ ಇದ್ದೇನೆ. ಅವರು ದೇಶದ ರಕ್ಷಣೆ ಹೊತ್ತಂಥ ಗುತ್ತಿಗೆದಾರರೇ ? ಮರಾಠ ರಿಜಿಮೆಂಟ್ ಎಂದು ಹೆಸರು ಇರಬಹುದು ಆದರೆ ಅದರಲ್ಲಿ ಮರಾಠಿಗರೇ ಅಲ್ಲ ಲಿಂಗಾಯಿತರು ಇದ್ದಾರೆ, ಬ್ರಾಹ್ಮಣರು ಇದ್ದಾರೆ, ಎಲ್ಲಾ ಜಾತಿಯ ಜನರೂ ಇದ್ದಾರೆ, ಕರ್ನಾಟಕದವರೂ ಇದ್ದಾರೆ. ಅದರಲ್ಲಿ ಮಹಾರಾಷ್ಟ್ರದವರೂ ಕನ್ನಡಿಗರೂ ಬೇಕಾದಷ್ಟು ಜನ ಇದ್ದಾರೆ. ಆದುದರಿಂದ ನಮ್ಮ ದೇಶವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಅವರ ಒಬ್ಬರ ಮೇಲೆಯೇ ಇಲ್ಲ. ಅದು ಭಾರತೀಯರಾದ ಪ್ರತಿಯೊಬ್ಬನ ಜವಾಬ್ದಾರಿಯೂ ಆಗಿದೆ ಎಂದು ನಾನು ಹೇಳಬಯಸುತ್ತೇನೆ. ಕರ್ನಾಟಕದ ಗಡಿ ನಮ್ಮ ಕವಿಗಳು ಹಾಡಿದಂತೆ ಕೃಷ್ಣೆ ಗೋದೆಯಿಂ ಮೆರೆ ಯುವ ನಾಡು. ಎಲ್ಲರೂ ನಮ್ಮ ಜಮೀನನ್ನು ಹರಿದು ಹಂಚಿಕೊಂಡು ಹೋದರೆ, ಆಂಧ್ರದವರು ನಮಗೆ ಬರಬೇಕು, ಮದ್ರಾಸಿನವರು ನಮಗೆ ಬರಬೇಕು, ಕೇರಳದವರು ನಮಗೆ ಬರಬೇಕು, ಮಹಾರಾಷ್ಟ್ರದವರು ನಮಗೆ ಬರಬೇಕು ಎಂದು ಹೇಳುತ್ತಾ ಹೋದರೆ, ನಮ್ಮಿಂದ ಎಲ್ಲಾ ಹೊರಗಡೆ ಹೋಗುತ್ತದೇ ವಿನಾ ಹೊರಗಡೆಯಿಂದ ಬರುವುದು ಯಾವುದೂ ಇಲ್ಲ ಎನ್ನುವುದು ನಿಶ್ಚಯವಾದ ಮಾತು. ಪ್ರತಿಯೊಂದು ಗಡಿಯಲ್ಲಿಯೂ ಕಳ್ಳರು ಇದ್ದಾರೆ ಎಂದು ಎಚ್ಚರಿಕೆಯನ್ನು ಹೇಳುವ ಕಾಲ ಬಂದಿದೆ. ಕಳ್ಳರು ಒಳಗಡೆಯೂ ಇದ್ದುಕೊಂಡು ಗಲಾಟೆ ಮಾಡುತ್ತಿದ್ದಾರೆ, ಹೊರಗಡೆ ಇದ್ದರೆ ಹೋಗಲಿ ಎಂದು ಹೇಳಬಹುದು. ಬೆಳಗಾಮ್‌ನಲ್ಲಿ 54 ಪರ್ಸೆಂಟು ಮರಾಠಿಗರು ಇದ್ದಾರೆ.

ಬೆಳಗಾವಿ ಮಹಾರಾಷ್ಟ್ರಕ್ಕೆ ಹೋಗಕೂಡದು. ನಿಪ್ಪಾಣಿಯಲ್ಲಿ 60 ಪರ್ಸೆಂಟು ಇದ್ದರೆ ನಿಪ್ಪಾಣಿ ಹೋಗಕೂಡದು. ಕಾರವಾರನಲ್ಲಿ ಬಹಳ ಜನರು ಇರಬಹುದು. ಶ್ರೀ ಕದಂರವರು ಹೇಳಿದ ಹಾಗೆ ಬರೇ ಏಕಭಾಷಾ ರಾಜ್ಯ ಕಟ್ಟುವುದಕ್ಕಾಗುವುದಿಲ್ಲ. ಕಣ್ಣಿನಲ್ಲಿ ಎಣ್ಣೆ ಹಾಕಿಕೊಂಡು ಮಾಡಿದರೂ 10 ಪರ್ಸೆಂಟು 20 ಪರ್ಸೆಂಟು ಬೇರೆ ಭಾಷೆ ಮಾತನಾಡುವವರು ಉಳಿದೇ ಉಳಿಯುತ್ತಾರೆ. ದೇಶದ ಏಳಿಗೆಗಾಗಿ ದುಡಿಯಬೇಕು, ಕರ್ನಾಟಕದ ಅಭ್ಯುದಯಕ್ಕಾಗಿ ದುಡಿಯಬೇಕು, ಬೇರೆ ಭಾವನೆಗೆ ಎಡೆ ಕೊಡಕೂಡದು ಎಂದು ಕೇಳಿಕೊಳ್ಳುತ್ತೇನೆ. ಬೆಳಗಾವಿನಲ್ಲಿ ಸುಮಾರು 54 ಪರ್ಸೆಂಟು, ಮರಾಠಿಗರು ಇದ್ದಾರೆ ಎಂದು ಹೇಳುವುದು ಹಸಿ ಸುಳ್ಳು. 1961ರ ಸೆನ್ಸಸ್ ಪ್ರಕಾರ ನೋಡಿದರೆ, 100ಕ್ಕೆ ಅವರು 46 ಪರ್ಸೆಂಟು ಇದ್ದಾರೆ. ಯಾವ ಆಧಾರದ ಮೇಲೆ ಅವರು ಹಾಗೆ ಹೇಳುತ್ತಾರೋ, ನನಗೆ ಗೊತ್ತಿಲ್ಲ. ಕರಾತ್ಮಕ ದೃಷ್ಟಿಯಿಂದ ಬೇಡುವುದಾದರೆ ಅವರಿಗೆ ಹಕ್ಕು ಇಲ್ಲ, ಭೌಗೋಳಿಕ ದೃಷ್ಟಿಯಿಂದ ಬೇಡಿದರೂ ಅವರಿಗೆ ಹಕ್ಕಿಲ್ಲ. ಇಂತಹ ಒಂದು ಪರಿಸ್ಥಿತಿಯಲ್ಲಿ ಬೆಳಗಾವಿ ಬೇಡುವುದು ಎಂದರೆ ಮತ್ತೊಮ್ಮೆ ಚುನಾವಣೆಯಲ್ಲಿ ಆರಿಸಿಬರುವ ಸಲುವಾಗಿ ಹೀಗೆ ಮಾಡುತ್ತಿದ್ದಾರೆ ಅಂದುಕೊಂಡಿದ್ದೇನೆ. ಈಗ ಇದ್ದಂಥ ದವಸ ಏಳು ಜನರಲ್ಲಿ 3-4 ಜನರು ಕೂಡ ಮುಂದಿನ ಸಾರೆ ದವಸ ಇರುವುದಿಲ್ಲ ಎಂದು ದೇವರ ಮೇಲೆ ಆಣೆಇಟ್ಟು ಹೇಳುತ್ತೇನೆ. ಇಂತಹ ಪರಿಸ್ಥಿತಿ ಬೆಳಗಾವಿನಲ್ಲಿ ಇರುವಾಗ, ಸುಳ್ಳು ಅಂಕಿ ಸಂಖ್ಯೆಗಳನ್ನು ಆರಿಸಿಕೊಂಡು ಬೆಳಗಾವಿ ಮತ್ತು ಇತರ ಭಾಗಗಳನ್ನು ಬೇಡುವುದು ಶುದ್ಧ ಅನ್ಯಾಯ ಇದಕ್ಕೆ ಎಡೆಕೊಡಬಾರದು. ಅಲ್ಪ ಸಂಖ್ಯಾತರು ಬೆಳಗಾವಿಯಲ್ಲಿ ಸುಖದಿಂದ ಇದ್ದಾರೆ. ಬಹುಸಂಖ್ಯಾತರೂ ಕೂಡ ರಾಜ್ಯದಲ್ಲಿ ಅಷ್ಟು ಸುಖವಾಗಿ ಇಲ್ಲ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಮೈನಾರಿಟಿ ಕಮೀಷನ್ ರಿಪೋರ್ಟ್ ನೋಡಿದರೆ ಅಲ್ಪಸಂಖ್ಯಾತರು ಎಷ್ಟು ಸಂತೋಷದಿಂದ ಇದ್ದಾರೆ ಎಂಬುದನ್ನು ಕಂಡುಕೊಳ್ಳಬಹುದು. ಬೆಳಗಾವಿನಲ್ಲಿ ಮರಾಠಿ ಶಾಲೆಗಳು ಎಷ್ಟು ಇವೆ, ಅವುಗಳ ಸ್ಥಿತಿ ಹೇಗಿದೆ ಮತ್ತು ಕನ್ನಡ ಶಾಲೆಗಳ ಸ್ಥಿತಿ ಹೇಗಿದೆ ಎಂಬುದನ್ನು ನೋಡಬೇಕು. ಅಡ್ಮಿನಿಸ್ಟ್ರೇಟರ್ ಬಂದನಂತರ ಕನ್ನಡ ಶಾಲೆಗಳ ಸ್ಥಿತಿ ಸುಧಾರಿಸದೆ ಇರಲಿ, ಶಾಲಾ ಕಟ್ಟಡಗಳು ಸೋರುತ್ತಾ, ಹೆಂಚುಗಳು ವಿದ್ಯಾರ್ಥಿಗಳ ತಲೆಯ ಮೇಲೆ ಬೀಳುವ ಸ್ಥಿತಿಯಲ್ಲಿದ್ದುವು. ಅಲ್ಲಿಯ ಕನ್ನಡ ವಿದ್ಯಾರ್ಥಿಗಳಿಗೆ ಮರಾಠಿ ಹೇರುವಂಥ ಸ್ಥಿತಿ 10 ವರ್ಷಗಳಿಂದ ನಾವು ಕಣ್ಣಾರೆ ಕಂಡಿದ್ದೇವೆ. ಈಗ ಕನ್ನಡ ಶಾಲೆಗಳು ಹೇಗಿವೆ ಎನ್ನುವುದಕ್ಕೆ ಮಹಾರಾಷ್ಟ್ರ ಸರ್ಕಾರ ಬಾರ್ಡರ್ ನೋಡಿ. ಅಲ್ಲಿಯ ಒಬ್ಬ ಉಪಮಂತ್ರಿ ಕನ್ನಡದ ಬೋರ್ಡ್ ನೋಡಿ ಕನ್ನಡ ಭಾಷೆ ಇನ್ನೂ ಇದೆಯೋ ಎಂದು ಹೇಳಿದರಂತೆ! ಆರೀತಿ ಇಲ್ಲಿ ಯಾವ ಪ್ರಜೆಯೂ ಮಾಡಿಲ್ಲ. ಯಾವ ಮಂತ್ರಿಯೂ ಮಾಡಲಿಲ್ಲ. ಬಾರ್ಡರ್ ಏರಿಯಾಕ್ಕೆ ನಮ್ಮ ಪಿ. ಡಬ್ಲ್ಯು.ಡಿ. ಮಂತ್ರಿಗಳು ಹೋದಾಗ 20–25 ಸಾವಿರ ಜನರು ವಾದ್ಯ ಮೇಳದೊಂದಿಗೆ ಸ್ವಾಗತಿಸಿ ದೊಡ್ಡ ಸಮಾರಂಭ ಮಾಡಿದ್ದು ಅವರ ಗಮನಕ್ಕೆ ತರಬಯಸುತ್ತೇನೆ. ಮರಾಠಿ ಶಾಲೆಗಳು ಊರ್ಜಿತ ಸ್ಥಿತಿಗೆ ಬರುತ್ತಾ ಇರುವುದಲ್ಲದೆ ಹೊಸ ಹೊಸ ಮರಾಠಿ ಶಾಲೆಗಳೂ ಬರುತ್ತಿದೆ. ಎಷ್ಟೋ ವರ್ಷಗಳಿಂದ ಬೆಳಗಾವಿ ಜನರ ಸಂಪರ್ಕ ನಮಗೆ ಇದ್ದಷ್ಟು ಅವರ ಸ್ವಭಾವ ನಮಗೆ ಗೊತ್ತಿದ್ದಷ್ಟು ಮತ್ತೊಬ್ಬರಿಗೆ ಗೊತ್ತಿಲ್ಲ. ಹಿಂದೆ ಬೊಂಬಾಯಿ ಸರ್ಕಾರ ಮತ್ತು ಗುಜರಾತ್ ಅಡ್ಮಿನಿಸ್ಟ್ರೇಷನ್ ಇದ್ದಾಗ, ಯಾವರೀತಿ ಬೆಳಗಾವಿ ಸುಧಾರಣೆ ಹೊಂದಿತ್ತು, ಕನ್ನಡ ಪ್ರಜೆಗಳು ಯಾವರೀತಿ ಇದ್ದರು, ಮರಾಠಿ ಪ್ರಜೆಗಳು ಯಾವರೀತಿ ಮುಂದುವರಿದರು, ಗುಜರಾತು ಎಷ್ಟು ಅಭಿವೃದ್ಧಿ ಹೊಂದಿತು, ಮರಾಠಿ ಪ್ರದೇಶದಲ್ಲಿ ಎಷ್ಟು ಅಭಿವೃದ್ಧಿ ಕಾರ್ಯಗಳು ನಡೆದವು ಎಂದು ನೋಡಿದರೆ ಗೊತ್ತಾಗುತ್ತದೆ. ಒಂದು ಅಭಿವೃದ್ಧಿ ಕಾರ್ಯವೂ ಕೂಡ ಅಲ್ಲಿ ಆಗಿಲ್ಲ. ಕಳೆದ 10 ವರ್ಷಗಳಲ್ಲಿ ನಮ್ಮ ಸರ್ಕಾರ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಡಾಮರ್ ರಸ್ತೆಗಳು, ಕುಡಿಯುವ ನೀರು ಎಲ್ಲಾ ಒದಗಿಸಿದ್ದಾರೆ. ನನ್ನ ತಾಲ್ಲೂಕಿನಲ್ಲಿ 1956ರ ಮುಂಚೆ 111 ಅಚ್ಚ ಕನ್ನಡಿಗರ ಹಳ್ಳಿಗಳಲ್ಲಿ ಕೇವಲ 20 ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ ಇತ್ತು. ಈಗ 111 ಹಳ್ಳಿಗಳಿಗೆ ಕುಡಿಯುವ ನೀರಿನ ಭಾವಿ ಸೌಲಭ್ಯ ಒದಗಿಸಿ ಕೊಟ್ಟಿದೆ. ಹಿಂದೆ ಏತಕ್ಕೆ ಎಲ್ಲರನ್ನೂ ಸರಿಸಮಾನಾದ ದೃಷ್ಟಿಯಿಂದ ನೋಡಿಕೊಳ್ಳಲಿಲ್ಲ? ಬೆಳಗಾವಿ ಏತಕ್ಕೆ ಅಭಿವೃದ್ಧಿ ಆಗಲಿಲ್ಲ? ಅದಕ್ಕೆ ಉತ್ತರ ಕೊಡಿ, 10 ವರ್ಷದಲ್ಲಿ ಶರಾವತಿ ವಿದ್ಯುಚ್ಛಕ್ತಿ ಬಂತು, ಕುಡಿಯುವ ನೀರಿನ ಯೋಜನೆ, ಜಾರಿಗೆ ಬಂತು, ಅಲ್ಯೂಮಿನಿಯಮ್ ಫ್ಯಾಕ್ಟರಿ ಆಯಿತು, ಮೆಡಿಕಲ್ ಕಾಲೇಜು, ಒಳಚರಂಡಿ ಯೋಜನೆ ಆಯಿತು. ಇಷ್ಟೆಲ್ಲಾ ಮಾಡಿದ ಮೇಲೆ ಇನ್ನೂ ಸುಖ ಇಲ್ಲ ಎಂದರೆ ಯಾರು ನಂಬಬೇಕು? ಫ್ಯಾಕ್ಟ್ಸ್ ನಿಮ್ಮ ಮುಂದೆ ಇಟ್ಟುಕೊಂಡು ಹೀಗೆ ಹೇಳಿದರೆ, ಸುಮ್ಮನೆ ಪ್ರಚಾರವಾಗುತ್ತದೆ. ಒಂದು ಲಕ್ಷ ಜನತೆಯ ಸುಖದುಃಖ ನೋಡದೆ ನಿಮಗೆ ಆನರ್ಡ್ ಸೀಟು ಸಿಗಬೇಕು ಎಂದು ಜನತೆಯನ್ನು ಹುರಿತುಂಬಿಸಿ ಯಾವುದಾದರೂ ಗೂಂಡಗಿರಿ ಎಬ್ಬಿಸಿದರೆ ನಿಮಗೆ ದೋಷ ಬರುತ್ತದೆ. ಪ್ರಗತಿ ಆದರೆ, ಖಂಡಿತ ಅದು ನಮ್ಮಿಂದ ಆಗುತ್ತದೆ ಎಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ವಿ. ಮಾಗಾವಿ (ಹಾವೇರಿ).—ಮಾನ್ಯ ಸಭಾಪತಿಯವರೇ, ರಾಷ್ಟ್ರದಲ್ಲಿ ಇನ್ನೂ ಅನೇಕ ಜ್ವಲಂತ ಸಮಸ್ಯೆಗಳಿರುವಾಗ ರಾಜ್ಯಗಳ ನಡುವೆ ಗಡಿ ಸಮಸ್ಯೆಗಳು ಅತಿರೇಕಕ್ಕೆ ಮುಟ್ಟಿರುವುದು ಭಾರತದ ಒಕ್ಕೂಟಕ್ಕೆ ಅನಿಷ್ಟ—ಕಾರಕ ಮುನ್ಸೂಚನೆ ಎಂದು ನಾನು ತಿಳಿದಿದ್ದೇನೆ. ಕೇಂದ್ರ ಸರ್ಕಾರದವರು ಏಕಸದಸ್ಯ ಅಯೋಗ ನೇಮಕಮಾಡುವುದಕ್ಕೆ ನಿಶ್ಚಯ ಮಾಡುವುದು ನೋಡಿದರೆ, ಈ ಏಕಸದಸ್ಯ ಅಯೋಗ, ಬಹುಶಃ ದೇಶಕ್ಕೆ ಒಂದು ಧೂಮಕೇತು ಆಗಿ ಪರಿಣಮಿಸುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ಈ ರಾಜ್ಯಗಳ ನಡುವಣ ಜ್ವಾಲೆ ಮಹಾರಾಷ್ಟ್ರ ಕರ್ಣಾಟಕದೊಳಗೆ ಮುಗಿಯುವುದಿಲ್ಲ; ಇದು ದೇಶಾದ್ಯಾಂತ ಉಳಿದ ರಾಜ್ಯಗಳಿಗೂ ಹಬ್ಬ ದೇಶದಲ್ಲಿ ಒಂದು ಕೋಲಾಹಲವಾಗಿ, ರಕ್ತಪಾತವಾಗುವ ಪರಿಸ್ಥಿತಿಗೆ ಬರುತ್ತದೆ ಎಂದು ನಾನು ಹೇಳಬಯಸುತ್ತೇನೆ. ದೇಶದಲ್ಲಿ ಇವತ್ತಿನದಿವಸ ಅನೇಕ ಪ್ರಶ್ನೆಗಳು ಎದ್ದಿವೆ. ಪಾಕೀಸ್ತಾನ ಚೀನಾ ದೇಶಗಳ ಗಂಡಾಂತರ ಪರಿಸ್ಥಿತಿ ಇದೆ. ಜನರಲ್ಲಿ ಯಾವ ಕಾಲಕ್ಕೆ ಭಾವೈಕ್ಯ ಮಾಡಬೇಕಾಗಿತ್ತೋ, ಅಂತಹ ಕಾಲದಲ್ಲಿ ಜನರ ಭಾವನೆಯನ್ನು ಕೆರಳಿಸಿ, ರಾಜ್ಯ ರಾಜ್ಯಗಳೊಳಗೆ ಭಾವೋದ್ರೇಕ ಮಾಡುವಂತಹ ರೀತಿಯು, ಇದು ಒಳ್ಳೆಯದಲ್ಲ ಮತ್ತು ಇದಕ್ಕೆ ಒಂದು ಪರಿಹಾರ ತರುವಂತೆ ನಾವು ಒಂದು ಪ್ರಯತ್ನವನ್ನು ಮಾಡಬೇಕು. ಈತನ್ಮಧ್ಯೆ ಅನೇಕ ಘಟನೆಗಳು ನಡೆದುಹೋದುವು. ಗಂಗಾ ಕೃಷ್ಣಾ ನದಿಯಲ್ಲಿ ಎಷ್ಟೋ ಪ್ರವಾಹ ಹರಿದು ಹೋಗಿದೆ. ಈಗ ಮಹಾರಾಷ್ಟ್ರ ಏಕಸದಸ್ಯ ಅಯೋಗ ಆಗಲೇಬೇಕೆಂದು ಪಟ್ಟು ಹಿಡಿದಿದ್ದಾರೆ. ಇವತ್ತಿನ ದಿವಸ ವಲಯಸಭೆಗಳಲ್ಲಿ ಇಂತಹ ಒಂದು ಸಮಸ್ಯೆಗಳಿಗೆ ಒಂದು ಪರಿಹಾರವನ್ನು ಮಾಡಬಹುದಾದರೂ ಕೂಡ ಅದನ್ನು ಹಾಗೆ ಮಾಡುವುದು ಬೇಡ, ಏಕಸದಸ್ಯ ಆಯೋಗವಾಗಬೇಕೆಂದು ಹೇಳಿರುವುದನ್ನು ನೋಡಿದರೆ, ಇದು ದೇಶಕ್ಕೆ ಬರತಕ್ಕಂತಹ ಕಷ್ಟ ಕಾಲ ಬರಬೇಕೆಂದು ಮಹಾರಾಷ್ಟ್ರದವರು ನಿಶ್ಚಯಮಾಡಿದ ಹಾಗೆ ಕಾಣುತ್ತದೆ. ನಿಜವಾಗಿಯೂ ಶ್ರೀ ನಾಯಕರಲ್ಲಿ ಭಾಷಾಭಿಮಾನಕ್ಕಿಂತ ಹೆಚ್ಚು ದೇಶಾಭಿಮಾನವಿದ್ದರೆ, ಇದನ್ನು ವಲಯ ಸಭೆಯಲ್ಲಿ ಇತ್ಯರ್ಥ ಮಾಡಿಕೊಳ್ಳಬೇಕು. ದೇಶದಲ್ಲಿ ಒಂದು ಜ್ವಾಲೆ ಹಬ್ಬಿ ಶಾಂತಿಗೆ, ಪ್ರಗತಿಗೆ ಧಕ್ಕೆ ಬರುವಂತೆ ಮಾಡಬಾರದು ಎಂದು ನಾನು ಬಹಳ ಕಳಕಳಿಯಿಂದ ಹೇಳುತ್ತೇನೆ. ಕೆಲವರು ಹೇಳುತ್ತಾರೆ, ನೀವು ಏಕಸದಸ್ಯ ಅಯೋಗಕ್ಕೆ ಹೇಗೆ ಒಪ್ಪಿದ್ದೀರಿ ? ಎಂದು. ಯಾವುದೇ ಒಂದು ವ್ಯಾಜ್ಯದ ತೀರ್ಮಾನ ಆಗಬೇಕಾದರೆ ಎರಡು ಪಕ್ಷಗಳಲ್ಲಿ ವಿವೇಕ ಉದಯವಾಗಬೇಕಾಗುತ್ತದೆ. ವಿವೇಕ ತೆರವು ಮಾಡಿದ ಸ್ಥಾನವನ್ನು ಅನರ್ಥ ಆಕ್ರಮಿಸುತ್ತದೆ. ಇವತ್ತಿನ ದಿವಸ ಒಂದು ಅಣ್ಣತಮ್ಮರಿದಿರ ಕಲಹವನ್ನು ಒಂದು ಪಂಚಾಯಿತಿಗೆ ಒಬ್ಬ ಎಳೆಯುವಾಗ ಇನ್ನೊಬ್ಬ ನಾನು ಕೋರ್ಟಿಗೇನೇ ಹೋಗುತ್ತೇನೆ ಎಂದು ಹೇಳಿದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಇದನ್ನು ನಮಗಿಂತಲೂ ಹೆಚ್ಚಾಗಿ ಮಹಾರಾಷ್ಟ್ರದ ಮುಖಂಡರು, ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚಿನ ವಿಚಾರಮಾಡಬಹುದು. ಇದರ ಜೊತೆಗೆ ಇತರ ಅನೇಕ ಪ್ರಶ್ನೆಗಳು ಸಹ ಏಳುತ್ತವೆ. ವಿದರ್ಭದ ಪ್ರಶ್ನೆ ಕೂಡ ಏಳುತ್ತದೆ. ಇದೆಲ್ಲ ನಾಯಕರು ತಿಳಿಯಬೇಕಾದ ಮಾತುಗಳು. ಆದರೆ ಅವರು ಪಟ್ಟು ಹಿಡಿದುದಾದರೆ ಅಯೋಗದ ರಚನೆ ಅನಿವಾರ್ಯ. ಅನಿಷ್ಟವನ್ನು ಇದುರಿಸಲೇಬೇಕಾದಾಗ ದೇಶವನ್ನು ಗಂಡಾಂತರಕ್ಕೆ ನಾವೇ ಎಳೆದ ಹಾಗಾಗುತ್ತದೆ. ಸಣ್ಣಪುಟ್ಟ ಹೊಂದಣಿಕೆಗಳಿಗೆ ಈ ಅಯೋಗವನ್ನು ಪರಿಮಿತಿಗೊಳಿಸುವುದು ಒಂದು ಯೋಗ್ಯ ಹಾಗೂ ಸಾಧುವಾದ ಮಾರ್ಗವೆಂದು ನಾನು ತಿಳಿದುಕೊಂಡಿದ್ದೇನೆ. ನಾವು ಅನಿಷ್ಟವನ್ನು ಎದುರಿಸಲೇ ಬೇಕಾದಾಗ ನಾವು ಚಿಕ್ಕಪುಟ್ಟ ಹೊಂದಾಣಿಕೆಗಳನ್ನು ಮಾಡಿಕೊಳ್ಳೋಣ. ಹೆಚ್ಚಿಗೆ ಕೊಟ್ಟರೆ ದೇಶದಲ್ಲಿ ಅನಾಹುತವಾಗುತ್ತದೆ ಎಂಬುದನ್ನು ನಾವು ತಿಳಿಯಬೇಕು. ಆದರೆ ಮಹಾರಾಷ್ಟ್ರ ಮುಖಂಡರು ಇದನ್ನು ಯಾವುದೋ ಒಂದು ರೀತಿಯ ಗಡಿಯ ಸಮಸ್ಯೆಗೆ ತಂದು ನಿಲ್ಲಿಸಿ, ಅದಕ್ಕೋಸ್ಕರ ನಾವು ಕೊನೆಯವರೆಗೆ ಬಡಿದಾಡುತ್ತೇವೆ ಎಂದು ತಮ್ಮ ರೀತಿ ನೀತಿಗಳನ್ನು ವ್ಯಕ್ತಪಡಿಸುವುದು, ದೇಶದ ಹಿತದೃಷ್ಟಿಯಿಂದ ಬಹಳ ದುರದೃಷ್ಟಕರವೆಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಅನೇಕ ಮಾನ್ಯ ಮಿತ್ರರುಗಳು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ಕದವರು ಹೇಳುತ್ತಾರೆ, ಮಹಾರಾಷ್ಟ್ರದವರು ದೇಶದ ಗಡಿಗಳಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದು. ಅದಕ್ಕೆ ನಾನಾದರೂ ಹೇಳುತ್ತೇನೆ, ಮಹಾರಾಷ್ಟ್ರದವರು ಆ ರೀತಿ ಕೆಲಸ ಮಾಡಲು, ಮೈಸೂರು ರಾಜ್ಯದ ಕಾರ್ಯಪ್ಪನವರು ಮತ್ತು ತಿಮ್ಮಯ್ಯನವರಂತಹ ಜನರಲ್‌ಗಳು ಕಾರಣವೆಂದು ಅವರು ತಿಳಿದುಕೊಳ್ಳಬೇಕು. ಅವರ ಕೈಯಿಂದ ಒಳ್ಳೆಯ ತರಬೇತು ಸಿಕ್ಕಿದುದರಿಂದ, ಅಲ್ಲಿ ಒಳ್ಳೆಯ ಹೆಸರು ಬರಲು ಕಾರಣವಾಯಿತು.

ಮೊನ್ನೆಯ ಸಲ ಕಾಂಗ್ರೆಸ್ ವರ್ಕಿಂಗ್ ಕಮಿಟಿ ಕೂಡಿದಾಗ, ಏಕಸದಸ್ಯ ಆಯೋಗಕ್ಕೆ ಒಳಪಟ್ಟ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳಿಬ್ಬರೂ ತಮ್ಮ ತಮ್ಮೊಳಗೆ ಮಾತನಾಡಬೇಕೆಂದು ನಿಶ್ಚಯಮಾಡಿಕೊಂಡಿದ್ದಾರೆ. ಇದು ಅವರು ಹಾದಿ ತಪ್ಪಿದ ಹೆಜ್ಜೆಯನ್ನು ಸಕಾಲಕ್ಕೆ ಸರಿಪಡಿಸಿಕೊಂಡಿದ್ದಾರೆ ಎಂದು ಹೇಳಬಹುದು. ಇಲ್ಲಿ ಎಲ್ಲಾ ಪಕ್ಷಗಳು ಯೋಗ್ಯ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಇವತ್ತಿನ ದಿವಸ ಏಕಸದಸ್ಯ ಆಯೋಗವು ಆಗಬಾರದು,

ಅದು ಆದರೆ ದೇಶಕ್ಕೆ ಹಾನಿಯಾಗುತ್ತದೆ. ಒಪ್ಪಿಕೊಂಡರೂ ಕೂಡ ಇನ್ನೂ ಕೆಲವು ಪ್ರಶ್ನೆಗಳಾದಂತಹ, ಕರ್ನಾಟಕದ ಹೊರಗಡೆ ಇರುವಂತಹ ಭಾಗಗಳನ್ನು ಬೇಗನೆ ಬರುವಂತೆ ಮಾಡಬೇಕು. ಈಗ ಹೊರಗೆ ಇರುವಂತಹ ಕನ್ನಡ ಪ್ರದೇಶಗಳಾದ ಅಕ್ಕಲಗೋಟ್, ಮಡಕಶಿರ, ಕಾಸರಗೋಡು, ಶೋಲಾಪುರ ಮುಂತಾದುವುಗಳು ಕನ್ನಡಾಂಬೆಯಿಂದ ಬೇರ್ಪಟ್ಟು ಇರುವುದನ್ನು, ನಿರಾಕರಿಸದೆ ಅವರನ್ನು ಕನ್ನಡ ಬಂಧುಗಳೊಂದಿಗೆ ಸೇರಿಸುವಂತೆ ಮಾಡಬೇಕೆಂದು ಹೇಳುತ್ತೇನೆ. ಅವರು ಎಲ್ಲಿಯವರೆಗೆ ಅಶಾಂತತೆಯಿಂದ ಇರುವುದನ್ನು ನಾವು ನೋಡುತ್ತಿರುವುದು ? ಆದ್ದರಿಂದ ಅವರನ್ನೂ ನಾವು ನಮ್ಮೊಂದಿಗೆ ಕರೆದುಕೊಳ್ಳಬೇಕು. ಇದನ್ನು ನಾನು ನನ್ನ ವೈಯಕ್ತಿಕ ಅಭಿಪ್ರಾಯವಾಗಿ ಹೇಳುತ್ತಿರುವುದು. ಕೆಲವರು ಬೇರೆ ಅಭಿಪ್ರಾಯ ಹೇಳಬಹುದು.

ಇನ್ನೊಂದು ವಿಷಯ. ಇಂತಹ ದುರ್ಧರ ಪ್ರಸಂಗದಲ್ಲಿ ನಮ್ಮಲ್ಲಿ ಒಗ್ಗಟ್ಟು ಮಾಡಬೇಕು. ಮಹಾರಾಷ್ಟ್ರದ ಸಭೆಯಲ್ಲಿ ಸರ್ವಾನುಮತದ ನಿರ್ಣಯವಾದಾಗ, ಇಲ್ಲಿ ಅನೇಕ ಪಕ್ಷಗಳ ಸದಸ್ಯರು ಅವರವರ ಧಾಟಿಯಲ್ಲಿ ಹೇಳಿದ್ದಾರೆ. ನಾನಾದರೂ ಹೇಳುವುದೇನೆಂದರೆ, ಕರ್ಣಾಟಕದ ಬಗ್ಗೆ, ಕರ್ನಾಟಕದ ಪ್ರಶ್ನೆ ಬಂದಾಗ ಯಾವ ಭಿನ್ನಾಭಿಪ್ರಾಯಕ್ಕೂ ಅವಕಾಶ ಕೊಡಬಾರದು. ಎಲ್ಲರೂ ಒಂದಾಗಬೇಕು.

ಶ್ರೀ ಟಿ. ಎನ್. ಮಾದಪ್ಪ ಗೌಡ.—ತಾವು ಹೇಳುತ್ತಿರುವುದು, ಹೊರಗಡೆ ಇರತಕ್ಕಂತಹ ಪ್ರದೇಶಗಳು ಬರಬೇಕೆಂದು ಕಳಕಳಿಯಿದೆ, ಅವರು ಬರಬೇಕೆಂಬ ವಾದ ಇದೆ. ಅದೇ ವಾದ ಸರಣಿ ಮಹಾರಾಷ್ಟ್ರದವರದು. ಇದರಿಂದ 1956ನೇ ಇಸವಿ ನವಂಬರ ಒಂದನೇ ತಾರೀಕಿನಂದು ಏನು ತೀರ್ಮಾನವಾಗಿತ್ತೋ, ಅದನ್ನೇ ಇಟ್ಟುಕೊಳ್ಳುವುದು ಒಳ್ಳೇಯದಲ್ಲವೇ ?

ಶ್ರೀ ಬಿ. ವಿ. ಮಾಗಾವಿ.—ಅದಕ್ಕೆ ಆಮೇಲೆ ಉತ್ತರ ಹೇಳುತ್ತೇನೆ. ಈಗ ನಾನು ಹೇಳುವುದು ಇಷ್ಟೆ; ಕರ್ನಾಟಕದ ಗಡಿ ವಿಚಾರದಲ್ಲಿ ನಮ್ಮಲ್ಲಿ ರಾಜಕೀಯ ಬೇಡ. ಎಲ್ಲರಿಗೂ ಕಳಕಳಿ ಇದೆ. ಅಲ್ಲದೆ ಕನ್ನಡಿಗರ ಅಂತರಂಗ ರಾಜಕೀಯ ರಾಕಸಿ ಮಹಾತ್ವಾಕಾಂಕ್ಷೆಗೆ ಒಂದು ರಂಗಸ್ಥಳವಾಗದಿರಲಿ. ಯಾವುದಾದರೂ ವಿಚಾರವಾಗಲಿ, ಏನಾದರೂ ಇದ್ದರೆ ಅದನ್ನು ರಾಜಕೀಯವಾಗಿ ಮಾಡದ ಹಾಗೆ ನಾವು ವರ್ತಿಸಬೇಕು. ನಮ್ಮ ಮಾನ್ಯ ಮುಕ್ಕಣ್ಣಪ್ಪನವರು ಮಾತನಾಡಿದಾಗ ಹೇಳಿದರು—ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡಿದ್ದಾರೆ, ಇದು ಎಲ್ಲಾ ಮಾಡುವುದು ಕಾಂಗ್ರೆಸ್ಸಿಗರು, ಅವರು ಮಾಡುವುದು ಎಲ್ಲಾ ತಪ್ಪು ಎಂದು. ಹಾಗೆ ಇದರಲ್ಲಿ ರಾಜಕೀಯವಾಗಿ ಮಾತನಾಡುವುದು ಬೇಡ.

ಶ್ರೀ ಮುಕ್ಕಣ್ಣಪ್ಪನವರು, ಇಂಥ ನುರಿತ ಪಾರ್ಲಿಮೆಂಟೇರಿಯನ್ನರು, ಶ್ರೀ ನಿಜಲಿಂಗಪ್ಪನವರ ವಿಷಯದಲ್ಲಿ ಹೇಳಿದ್ದು ನನಗೆ ಆಶ್ಚರ್ಯವಾಯಿತು. ವರ್ಕಿಂಗ್ ಕಮಿಟಿಯವರೆಲ್ಲರೂ ಈ ರೀತಿ ಕಮಿಷನ್ ಮಾಡಬೇಕೆಂದು ಹೇಳಿದಾಗ ಶ್ರೀಮಾನ್ ನಿಜಲಿಂಗಪ್ಪನವರೊಬ್ಬರು ವಿರೋಧ ಮಾಡಿದ್ದರಿಂದ ಏನು ಪ್ರಯೋಜನವಾಗುತ್ತಿತ್ತು ? ಅಲ್ಲಿ ಒಪ್ಪಿದರೂ ಹೊರಗೆ ಬಂದಮೇಲೆ ತಮ್ಮ ಪ್ರತಿಕ್ರಿಯೆ ಯೇನೆಂಬುದನ್ನು ಅವರು ತಿಳಿಸಿದ್ದಾರೆ. ಅಲ್ಲದೆ, ಈ ಹೊತ್ತು ಕಾಂಗ್ರೆಸ್ ಪಕ್ಷದ ಒಳಗೆ ಏನೇನು ನಡೆಯುತ್ತದೆಂಬುದು ಅವರವರ ವಿಷಯ. ವಿರೋಧ ಪಕ್ಷದವರಿಗೂ ಅದಕ್ಕೂ ಏನು ಸಂಬಂಧವಿಲ್ಲ. ಅಲ್ಲಿ ಏನೋ ಆಗಿದ್ದನ್ನು ವಿರೋಧಪಕ್ಷದವರು ಉಪಯೋಗಿಸಿಕೊಂಡು ಅದನ್ನೇ ಒಂದು Political Capital ಮಾಡಿಕೊಳ್ಳುವುದು ಸರಿಯಲ್ಲ.

ಒಬ್ಬ ಸದಸ್ಯರು.—ರಾಜ್ಯದ ಗಡಿಯ ವಿಷಯ ಕಾಂಗ್ರೆಸ್ಸಿನವರಿಗೆ ಮಾತ್ರ ಸಂಬಂಧಿಸಿದ್ದಲ್ಲ.

ಶ್ರೀ ಬಿ. ವಿ. ಮಾಗಾವಿ.—ಇದು ಕಾಂಗ್ರೆಸ್ ಪಕ್ಷದವರಿಗೆ ಸಂಬಂಧಿಸಿದ್ದೇ ಹೊರತು ಉಳಿದಿರುವವರಿಗಲ್ಲ. ಕಾಂಗ್ರೆಸ್ ಮನೆಯ ಪ್ರಶ್ನೆಯ ಅದು. ಅಂಥದಕ್ಕೆ ವಿರೋಧಪಕ್ಷದವರು ಕೈಹಾಕಿ Political capital ಮಾಡಿಕೊಳ್ಳುವುದನ್ನು ನಾನು ವಿರೋಧಿಸುತ್ತೇನೆ. ನಮ್ಮ ನಮ್ಮ ವಿಷಯವನ್ನು ನಾವೇ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಬಿಡುವುದು ಒಳ್ಳೆಯದು.

ಅಲ್ಲದೆ, ಶ್ರೀಮಾನ್ ನಿಜಲಿಂಗಪ್ಪನವರು ಸಭೆಯಲ್ಲಿದ್ದವರು one-man commissionಗೆ ಒಪ್ಪಿದರೋ ಇಲ್ಲವೋ ಹೇಗೆ ಗೊತ್ತು ? ವರ್ಕಿಂಗ್ ಕಮಿಟಿಯ ಅಧ್ಯಕ್ಷರು ಮತ್ತು ಕಾಮರಾಜರು ಏನು ಹೇಳಿದರೋ ಗೊತ್ತಿಲ್ಲ. ಸುಮ್ಮನೆ ಇಲ್ಲದ ಸಲ್ಲದ ಊಹೆ ಮಾಡಿಕೊಂಡು, ಆ ವ್ಯಕ್ತಿಗಳು ಸಭೆಯಲ್ಲಿ ಇಲ್ಲದಿರುವಾಗ ಅವರಮೇಲೆ ಅಪಾದನೆಗಳನ್ನು ಮಾಡುವುದು ಸರಿಯಲ್ಲ. ಬೆಳಗಾಂ, ನಿಪ್ಪಾಣಿ ಕಾರವಾರಗಳನ್ನು ನಿಜಲಿಂಗಪ್ಪನವರು ಕೊಡುವುದಕ್ಕೆ ಒಪ್ಪಿಕೊಂಡು ಬಂದಿದ್ದಾರೆಂದು ಹೇಳುವುದು ಆಶ್ಚರ್ಯ ಕಾರಕ! ಈ ಹೊತ್ತು ಶ್ರೀಮಾನ್ ನಿಜಲಿಂಗಪ್ಪನವರು ನವ ಕರ್ನಾಟಕದ ಮಹಾಶಿಲ್ಪಿಗಳೆಂದು ಹೆಸರಾಂತವರೆಂದರೆ ತಪ್ಪಿಲ್ಲ.

ಒಬ್ಬ ಸದಸ್ಯರು.—ಶ್ರೀ ಹಳ್ಳಿಕೇರಿಯವರು ?

ಶ್ರೀ ಬಿ. ವಿ. ಮಾಗಾವಿ.—ಅವರೂ ಹೌದು. ಕನ್ನಡ ನಾಡಿನ ಬಗ್ಗೆ ಯಾರಿಗೂ ಇಲ್ಲದಷ್ಟು ಮೋಹ ಶ್ರೀಮಾನ್ ನಿಜಲಿಂಗಪ್ಪನವರಿಗೆ ಇದೆ. ಹೀಗಿರುವಾಗ, ಈ ಹೊತ್ತು ಹಡದ ತಾಯಿ ತನ್ನ ಕೂಸಿನ ಬಲಗೈಯನ್ನು ತಾನೇ ಕತ್ತರಿಸುವದಕ್ಕೆ ಹತ್ತಿದದ್ದಳೆ ಎಂದು ಹೇಳಿದರೆ ನಂಬಬಹುದೆ? ಶ್ರೀಮಾನ್ ನಿಜಲಿಂಗಪ್ಪನವರು ಬೆಳಗಾಂ ನಿಪ್ಪಾಣಿ ಕಾರವಾರಗಳನ್ನು ಕೊಡುವುದಕ್ಕೆ ಎಂದಿಗೂ ಒಪ್ಪಿಗೆ ಕೊಡಲಾರರು. ಅವರಲ್ಲಿರುವ ಅಭಿಮಾನ ಎಲ್ಲರಿಗಿಂತಲೂ ಹೆಚ್ಚಿದೆಯೆಂದು ನಾನು ಹೇಳಬಲ್ಲೆ. ಬಾಕಿಯವರಿಗೆ ಯಾರಿಗೂ ಕಡಮೆಯಲ್ಲ ಅವರು. ಆದ್ದರಿಂದ ಇಂದು ನಮ್ಮ ಕರ್ತವ್ಯವೇನೆಂದರೆ, ನಮ್ಮ ಮುಖಂಡತ್ವವನ್ನು ವಹಿಸಿರುವ ಆ ಶ್ರೀಮಾನ್ ನಿಜಲಿಂಗಪ್ಪನವರ ಕೈ ಬಲಪಡಿಸೋಣ. ಮಹರಾಷ್ಟ್ರದವರು ಈಗ ಯಾವ ರೀತಿ ಎಲ್ಲ ಪಕ್ಷದವರೂ ಸೇರಿ, ಪಕ್ಷ-ಪಂಗಡಗಳ ವ್ಯತ್ಯಾಸ ಮನೋಭಾವನೆಗಳನ್ನು ಮರೆತು, ಶ್ರೀ ಚವ್ಹಾನರು ತಮ್ಮವರು, ಶಿವಾಜಿ ಶಿಷ್ಯರು ಎಂದು ಹೇಳುತ್ತಾ ಒಂದಾಗಿದ್ದಾರೋ, ಹಾಗೆಯೇ ನಾವೆಲ್ಲರೂ ಒಂದಾಗಿ ನಮ್ಮ ಮುಖಂಡರನ್ನು ಬೆಂಬಲಿಸ ಬೇಕು. ಆ ಒಗ್ಗಟ್ಟನ್ನು ಕಳೆದುಕೊಂಡು ಗಡಿಯನ್ನೂ ಕಳೆದುಕೊಳ್ಳುವುದು ಬೇಡ. ಈ ಚಿಕ್ಕಪುಟ್ಟ ರಾಜಕೀಯ ಮಾತುಗಳು ಕೊನೆಗಾಣಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri L. B. BIRJE (Khanapur).—(*Marathi speech*).

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಪಾಯಿಂಟ್ ಆಫ್ ಆರ್ಡರ್ ಸ್ವಾಮಿ. ಈಗ ನಾವು ಟೈಮ್ ಎಕ್ಸ್‌ಟೆಂಡ್ ಮಾಡಿಲ್ಲ. ನಾವು ಒಂದೇ ಸಮನೆ ಕುಳಿತುಕೊಂಡಿದ್ದೇವೆ. ಟೀವಿರಾಮ ಸಹ ಇರಲಿಲ್ಲ. ಅಲ್ಲದೆ ನಾಳೆ ಬೆಳಗ್ಗೆ ಎಂಟೂವರೆ ಘಂಟೆಗೆ ಪುನಃ ನಾವು ಇಲ್ಲಿ ಸೇರಬೇಕಾಗಿದೆ.

ಇನ್ನೊಂದು ಏನೆಂದರೆ, ಮಾನ್ಯ ಸದಸ್ಯರು ಮಾತನಾಡುವುದು ನಮಗೆ ಯಾರಿಗೂ ಅರ್ಥ ವಾಗುವುದಿಲ್ಲ. ಅವರ ಭಾಷನ ರಿಕಾರ್ಡ್ ಸಹ ಆಗುತ್ತಿಲ್ಲ. ಅವರ ವಿಚಾರಗಳು ಏನಾದರೂ ಇದ್ದರೆ ಅದನ್ನು ಬರವಣಿಗೆಯಲ್ಲಿ ಕೊಡಬಹುದು. ನಮಗೆ ಗೊತ್ತಾಗುವ ಭಾಷೆಯಲ್ಲಿ ಮಾತನಾಡಿ ದ್ದರೆ ಕುಳಿತುಕೊಂಡು ಕೇಳಬಹುದಾಗಿತ್ತು. ಭಾಷಣ ಯಾರಿಗೂ ಅರ್ಥವಾಗುವುದಿಲ್ಲ. ಈಗ ವೇಳೆ ಆರು ಘಂಟೆಗೆ ಮೇಲಾಯಿತು.

Mr. SPEAKER.—The first observation I wish to make is that this Hon'ble Member should not raise such points of order hereafter.

Secondly, the circumstance that he does not know the particular language is no fault of anybody else. There is no objection to his studying that language and trying to follow it. Nor can I ask him to conclude because the Hon'ble Member Sri Birje is not able to speak in a language which can be recorded here. The Hon'ble Member Sri Birje will kindly conclude his speech today.

(*Sri L. B. Birje Concluded his Marathi Speech.*)

Mr. SPEAKER.—Tomorrow at 10 o'clock the Chief Minister will intervene.

An HON'BLE MEMBER.—Tomorrow we shall meet at 9 A.M.

Mr. SPEAKER.—Then, shall I drop the question hour? I asked the members and then issued the programme and how can I change the time? I need not have asked them but I asked them because I love them. After that, it was cyclostyled and issued. Members have left and now Hon'ble Member makes this request.

Sri C. J. MUCKANNAPPA.—The questions may be taken up in the afternoon.

Mr. SPEAKER.—The rule says that the first hour in the day should be devoted to questions and answers.

Sri C. J. MUCKANNAPPA.—Then, instead of 10 A.M., let the Chief Minister reply at 11 A.M.

Mr. SPEAKER.—The House will now adjourn to meet tomorrow at 8.30 A.M.

The House adjourned at Six of the Clock to meet at Thirty Minutes past Eight of the Clock on Thursday, the 28th July 1966.